ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಉದ್ಯಮಗಳ ಸಮಿತಿಯ ನೂರ ಹದಿಮೂರು ಹಾಗೂ ನೂರ ಹದಿನಾಲ್ಕನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ: ರಾಜ್ಯದಾದ್ಯಂತ "ಚಿಕೂನ್ ಗುನ್ಯಾ" ರೋಗ ಹರಡುತ್ತಿರುವ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗ ನಾನು ಪ್ರಸ್ತಾಪ ಮಾಡುವ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಯವರು ಮೇಲ್ಮನವಿಯಲ್ಲಿ ಇದ್ದಾರೋ, ಏನೋ ಗೊತ್ತಿಲ್ಲ. ಈಗ ಇಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಇದ್ದಾರೆ. ಈ ಚಿಕೂನ್ ಗುನ್ಯಾ ರೋಗದ ಬಗ್ಗೆ ನಾವು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತಿಲ್ಲ. ಇಲ್ಲಿ ಏನೋ ಉದ್ದೇಶಪೂರ್ವಕವಾಗಿ ಸರ್ಕಾರಕ್ಕೆ ಮುಜುಗರ ಮಾಡುವಂಥ ಅಭಿಪ್ರಾಯ ನಮಗೆ ಇಲ್ಲ. ನಾನು ಮೊನ್ನೆ ದಿವಸ ಟಿ.ವಿ.ಯಲ್ಲಿ ನೋಡುವಾಗ ಶಿವಮೊಗ್ಗ ಜಿಲ್ಲೆಯಲ್ಲೂ ಕೂಡ ಸುಮಾರು 52 ಸಾವಿರಕ್ಕಿಂತಲೂ ಹೆಚ್ಚು ರೋಗಿಗಳು ಇದ್ದಾರೆಂಬ ವರ್ತಮಾನ ಇದೆ. ತಮ್ಮ ಕ್ಷೇತ್ರವಾದ ಶಿಕಾರಿಪುರದಲ್ಲಿ ಈ ರೋಗ ಇದೆ. ಈಗ ಈ ರೋಗ ಎಲ್ಲಾ ಕಡೆಗಳಲ್ಲೂ ಹರಡುತ್ತಿದೆ. ನಿನ್ನೆ ದಿವಸ ಡಾ: ರುದ್ರಯ್ಯ ಎನ್ನುವವರ ತಂಡ ಬಂದು, ಸರ್ಕಾರ ಈ ರೋಗವನ್ನು ತಡೆ ಹಿಡಿಯುವಂಥ ಕೆಲಸವನ್ನು ಮಾಡುತ್ತಿಲ್ಲ. ಇದಕ್ಕೆ ಏನು ಮಾಡಿದರೆ ಹೋಗುತ್ತದೆನ್ನುವ ಬಗ್ಗೆ, ಇದಕ್ಕೆ ಸ್ಪ್ರೇ ಮಾಡಿದರೆ, ಹೋಗುತ್ತದೆಂಬ, ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಅಶೋಕ್‌ರವರು ಪ್ರಸ್ತಾಪ ಮಾಡಿದಂತೆ, ಅವರೂ ಕೂಡ ಆ ಭಾಗಕ್ಕೆ ಹೋಗಿ ಬಂದಿದ್ದಾರೆ. ನಾನೂ ಕೂಡ ನನ್ನ ಮತಕ್ಷೇತ್ರದಲ್ಲಿ ಹೋದಾಗ ಸಂಬಂಧಪಟಟ ಉನ್ನತ ಮಟ್ಟದ ಅಧಿಕಾರಿಗಳು ಬಂದಿದ್ದರು. ಈಗ ಸರ್ಕಾರ ಇದರ ಬಗ್ಗೆ ಏನೂ ವಿಚಾರ ಮಾಡಿಲ್ಲವೆಂಬ ಆಪಾದನೆಯನ್ನು ನಾನು ಮಾಡುತ್ತಾ ಇಲ್ಲ. ಇದು ದಿನೇ ದಿನೇ ಬೆಳೆಯುತ್ತಾ ಇದೆ. ನಾವು ಇದನ್ನು ರಾಜಕೀಯವಾಗಿ ಮಾತನಾಡುವುದಕ್ಕೆ ಇಚ್ಛಿಸುವುದಿಲ್ಲವೆಂಬ ಮಾತನ್ನು ನಾನು ಮೊದಲೇ ಹೇಳಿದ್ದೇನೆ. ಇವತ್ತು ತಾವು ಕೇವಲ 14 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಇದು ಯಾವುದಕ್ಕೂ ಆಗುವುದಿಲ್ಲ, ಮೊದಲೇ ಉತ್ತರ ಕರ್ನಾಟಕದಿಂದ ಪ್ರಾರಂಭವಾದ ಈ ರೋಗ, ಬೆಂಗಳೂರು ನಗರದಲ್ಲೂ ಕೂಡ ಇದು ದಿನೇ ದಿನೇ ಹಬ್ಬುತ್ತಿದೆ. ಇದು ಒಂದು ವಿಚಿತ್ರವಾದಂಥ ರೋಗವಾಗಿದೆ, ಒಂದೊಂದು ಮನೆಯಲ್ಲಿ 5–6 ಜನರು ಬಳಲುತ್ತಿದ್ದಾರೆ. This is the fact. - - ಇದನ್ನು ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಎಲ್ಲಾ ಕಡೆಯಲ್ಲೂ ಕೆಲಸ ಮಾಡುತ್ತಿರುವ skilled technicians ಇದ್ದಾರೆ. ಪ್ರತಿಯೊಂದು ಆಸ್ಪತ್ರೆಯಲ್ಲಿ ಡಾಕ್ಟರುಗಳಿಗೆ ನಾನು ಈ ಮೊದಲು ಸಹ ಹೇಳಿದ್ದೇನೆ, you

have to create a momentum. ಏನೆಂದರೆ ಸರ್ಕಾರ ಇಂಥ ಒಂದು ಪರಿಸ್ಥಿತಿ ಬಂದಾಗ ಪರಿಣಾಮಕಾರಿಯಾಗಿ ಕೆಲಸ ಮಾಡುವಂಥ, ವಿಶ್ವಾಸವನ್ನು ಮೂಡಿಸುವಂಥ ರೀತಿಯಲ್ಲಿ, ಜನಾಭಿಪ್ರಾಯ ಮೂಡಿಸುವಂಥ ರೀತಿಯಲ್ಲಿ, ಸೈಕಾಲಜಿಕಲ್ ಆಗಿ, ಇವತ್ತು ಸರ್ಕಾರ ವಿಚಾರ ಮಾಡುತ್ತಿದೆಯೆನ್ನುವಮಥ ಭಾವನೆ ಮೂಡಿಸುವುದು ಮೊದಲನೆಯದು, ಎರಡನೆಯದು, ಇದಕ್ಕೆ ಬೇಕಾಗಿರುವಂಥ ಔಷಧಿ ಇದೆ, you have to call experts. ಎಲ್ಲಾ ಕಡೆಗಳಲ್ಲೂ ಟೆಕ್ನೀಶಿಯನ್ಸ್ ಅನ್ನು ಕಳುಹಿಸಬೇಕು. ಪ್ರತಿಯೊಂದು ಆಸ್ಪತ್ರೆಯಲ್ಲಿ ಎಲ್ಲಿ ದುಡ್ಡಿನ ಕೊರತೆ ಇದೆ, ಅಲ್ಲಿಗೆ ದುಡ್ಡು ಕೊಡುವಂಥಾದ್ದನ್ನು ಮಾಡಬೇಕು. ಅದಕ್ಕೆ ನಾನು ತಮ್ಮ ಮುಖಾಂತರ ಮಾನ್ಯ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇದು ಭಯಂಕರವಾಗಿ, ಇಡೀ ರಾಜ್ಯದಲ್ಲಿ, ಈ ರೋಗ ಬೆಳೆಯುತ್ತಿದೆ. ಇದನ್ನು ನಿಯಂತ್ರಣ ಮಾಡಬೇಕು. ಅದರಲ್ಲೂ ವಿಶೇಷವಾಗಿ ಹಳ್ಳಿ ಪ್ರದೇಶದಲ್ಲಿರುವಂಥ ಜನರಿಗೆ ತೊಂದರೆಯಾಗುತ್ತಿದೆ. ಇವತ್ತು ಅಲ್ಲಿ ಜನರಿಗೂ ಕೂಡ death ಆಗಿದೆ. ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಆದುದರಿಂದ ಇವತ್ತು ನಾನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ, ಈ ಬಗ್ಗೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದು ತಮ್ಮ ಮುಖಾಂತರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪ್ರಮುಖವಾಗಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು : ಇದರ ಬಗ್ಗೆ ಎಲ್ಲರೂ ಮಾತನಾಡುವುದಕ್ಕೆ ಹೋದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ಖಾಯಿಲೆ ಎಲ್ಲಿಂದ ಬಂತು? ಹೇಗೆ ಬಂತು? ಇದರ ಪರಿಸ್ಥಿತಿ ಏನು? ಇದರ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮ ಏನು? ಇದು ಇಡೀ ರಾಜ್ಯದಾದ್ಯಂತ ಸಾಂಕ್ರಾಮಿಕ ರೋಗದ ರೀತಿಯಲ್ಲಿ ಹರಡುತ್ತಿದೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಇದಕ್ಕೆ ಉತ್ತರವನ್ನು ಕೊಡುತ್ತಾರೆ. ತಾವು ಪ್ರತಿಯೊಂದು ವಿಷಯಕ್ಕೂ ಇಂಟರ್‌ಫಿಯರ್ ಆದರೆ........

ಶ್ರೀ ವಾಟಾಳ್ ನಾಗರಾಜ್ : ಇದು ಇಡೀ ರಾಜ್ಯದಾದ್ಯಮತ ಸಾಂಕ್ರಾಮಿಕ ರೋಗದ ರೀತಿಯಲ್ಲಿ ಹರಡುತ್ತಿದೆ. ಈ ರೋಗ ಯಾವ ಹಳ್ಳಿಯನ್ನೂ ಬಿಡುತ್ತಿಲ್ಲ, ಯಾವ ಪಟ್ಟಣವನ್ನೂ ಬಿಡುತ್ತಿಲ್ಲ ಎಲ್ಲಾ ಕಡೆಗಳಲ್ಲೂ ಹರಡುತ್ತಿದೆ. ಆಸ್ಪತ್ರೆಗಳಲ್ಲಿ ಇದಕ್ಕೆ ಅನೇಕ ಕಡೆ ಔಷಧಿಗಳು ಇಲ್ಲ, ವೈದ್ಯರುಗಳು ಇಲ್ಲ, ಸಾವಿರಾರು ಜನರು ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಈ ರೋಗದಿಂದ ಬಳಲುತ್ತಿದ್ದಾರೆ. ಇದಕ್ಕೆ ಸರ್ಕಾರ ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ, ಕ್ರಮ ಕೈಗೊಳ್ಳುತ್ತಿಲ್ಲ. ಈಗ ಸಭೆಯಲ್ಲಿ ಆರೋಗ್ಯ ಸಚಿವರು ಇಲ್ಲ. ಇವರು ಅನೇಕ ಸಾರಿ ಇಲ್ಲಿ ಹೇಳುತ್ತಿದ್ದರು, ರೋಗ ಬಂದಿದೆ, ಇದರ ಬಗ್ಗೆ ನಾವು ಗಮನವನ್ನು ಕೊಟ್ಟಿದ್ದೇವೆ ಎಂದು ಅನೇಕ ಕಡೆಗಳಲ್ಲಿ ಔಷಧಿಯನ್ನು ಕಳುಹಿಸುತ್ತೇದ್ದೇವೆಂದು ಎಲ್ಲವನ್ನೂ ಹೇಳಿದರು. ಇದು ಯಾವುದೂ ಪ್ರಾಮಾಣಿಕವಾಗಿ ಇಲ್ಲ. ಇದನ್ನು ನಾವು ರಾಜಕೀಯ

ಮಾಡುತ್ತಿಲ್ಲ, ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ, ಈಗ ಏನು ಕ್ರಮ ಕೈಗೊಳ್ಳುತ್ತೀರಿ? ಈಗ ಏನು ಕ್ರಮವನ್ನು ಕೈಗೊಂಡಿದ್ದೀರಿ? ಇದು ಎಲ್ಲಿಂದ ಬಂತು, ಹೇಗೆ ಬಂತು? ಇದೆಲ್ಲಾ ವಿಷಯಗಳಿಗೂ ತಾವು ವಿವರಣೆಯನ್ನು ಕೊಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಅಧ್ಯಕ್ಷರೇ, ಇವತ್ತು ನನ್ನ ಕಾನ್ಸ್‌ಟಿಟ್ಯೂಯೆನ್ಸಿಯಲ್ಲಿ ಶೇ.90 ರಷ್ಟು ಜನರು ಈ ಚಿಕೂನ್ ಗುನ್ಯಾ ರೋಗಕ್ಕೆ ಸಿಕ್ಕಿಕೊಂಡುಬಿಟ್ಟಿದ್ದಾರೆ. ಮೊಳಕಾಲು ಮತ್ತು ಮೊಳಕೈ ನೋವು ಪ್ರಾರಂಭವಾದ ಕೂಡಲೇ ಅವರು ಹಾಗೆ ಕುಳಿತುಕೊಂಡು ಬಿಡುತ್ತಾರೆ. ಹಳ್ಳಿ ಹಳ್ಳಿಗಳಿಗೆ ವ್ಯಾನ್ ತೆಗೆದುಕೊಂಡು ಹೋಗಿ ಎಂದರೂ ವ್ಯಾನ್ ತೆಗೆದುಕೊಂಡು ಹೋಗಿ ನಿಯಂತ್ರಣಕ್ಕೆ ತರಲು ಒಬ್ಬರೂ ತಯಾರಿಲ್ಲ. ಔಷಧಿಗಳೂ ಸಹ ಇಲ್ಲ. ಹಳ್ಳಿ ಹಳ್ಳಿಗೆ ವ್ಯಾನ್‌ಗಳನ್ನು ಕಳುಹಿಸಿದ್ದೇವೆ ಎಂದು ಇವರು ಹೇಳಿದರು. ಆದರೆ ಒಂದು ವ್ಯಾನ್ ಕೂಡ ಹೋಗಿಲ್ಲ. ಶೇ.90ರಷ್ಟು ಜನ ಎಷ್ಟು ತೊಂದರೆಯಲ್ಲಿದ್ದಾರೆ ಎಂದರೆ, ಇವತ್ತು ಅವರ ಹತ್ತಿರ ದುಡ್ಡಿಲ್ಲ. ಔಷದೋಪಚಾರಕ್ಕೆ ಒಬ್ಬೊಬ್ಬರಿಗೆ ಎರಡು ಸಾವಿರ ರೂಪಾಯಿ ಖರ್ಚಾಗುತ್ತದೆ. ಖಾಸಗಿ ದವಾಖಾನೆಗೆ ಹೋದರೆ ಔಷಧಿ ಸಿಗುತ್ತದೆ. ಆದರೆ ಆಸ್ಪತ್ರೆಗಳಲ್ಲಿ ಇಲ್ಲ. ಈ ತರಹದ ಸ್ಥಿತಿ ಬಂದಿರುವುದರಿಂದ ಹಳ್ಳಿಗಳ ಜನರು ಎಷ್ಟು ರೋಸಿಹೋಗಿದ್ದಾರೆ ಎಂದರೆ, ನಾವು ಅಲ್ಲಿಗೆ ಹೋದರೆ, ನೀವು ಏಕೆ ಶಾಸಕರಾಗಿದ್ದೀರಿ ಎಂದು ಗಲಾಟೆ ಮಾಡುತ್ತಿದ್ದಾರೆ. ಇದು ಭಯಂಕರವಾದ ಒಂದು ವಿಚಿತ್ರ ರೋಗ. ಈ ವಿಷಯದಲ್ಲಿ ರಾಜಕೀಯ ಮಾಡುವ ಪ್ರಶ್ನೆಯಿಲ್ಲ. ಜನರ ಪರಿಸ್ಥಿತಿ ನೋಡಿದರೆ ತುಂಬಾ ಗಂಭೀರವಾಗಿದೆ. ಅವರು ಈಚೆಗೆ ಹೋಗುವ ಹಾಗಿಲ್ಲ, ಆಚೆಗೆ ಹೋಗುವ ಹಾಗಿಲ್ಲ ಎನ್ನುವಂತಾಗಿದೆ. ಇದು ಕೆಲಸದ ಸಮಯವಾಗಿದೆ. ಆದ್ದರಿಂದ ಬಹಳ ಕಷ್ಟವಾಗಿದೆ. ಅವರೆಲ್ಲಾ ನಮ್ಮ ಹತ್ತಿರ ಬಂದು ಕುಳಿತು ಕಣ್ಣೀರು ಹಾಕುತ್ತಾರೆ, ನಮ್ಮ ಪರಿಸ್ಥಿತಿ ಹೀಗೆ ಆಗಿದೆ, ಸರ್ಕಾರದವರು ಬಂದು ಇದನ್ನು ನೋಡುವುದಿಲ್ಲ ಎಂದು ಹೇಳುತ್ತಾರೆ. ಇದನ್ನು ಸೀರಿಯಸ್ಸಾಗಿ ತೆಗೆದುಕೊಂಡು ಔಷಧಿಗಳ ವ್ಯವಸ್ಥೆ ಮಾಡಬೇಕು ಮತ್ತು ಸರ್ಕಾರ ಹಳ್ಳಿಹಳ್ಳಿಗಳಿಗೆ ವ್ಯಾನ್‌ಗಳನ್ನು ಕಳುಹಿಸಿ ಏನಾದರೂ ವ್ಯವಸ್ಥೆ ಮಾಡಿದರೆ ಸರಿ ಹೋಗುತ್ತದೆಯೇ ಹೊರತು, ಇದನ್ನು ಮಾಡಲಿಲ್ಲವೆಂದರೆ ಇದು ಸರಿಹೋಗತಕ್ಕಂಥ ವ್ಯವಸ್ಥೆ ಇಲ್ಲ ಎಂದು ಹೇಳುತ್ತಾ, ದಯವಿಟ್ಟು ಸರ್ಕಾರ ಇದರ ಬಗ್ಗೆ ಬಹಳ ಸೀರಿಯಸ್ಸಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೇ, ಈ ರೋಗಕ್ಕೆ ಅಲೋಪತಿಯಲ್ಲಿ ಮೆಡಿಸನ್ ಇಲ್ಲ. ಆದರೆ ಹೋಮಿಯೋಪತಿಯಲ್ಲಿ ಮೆಡಿಸನ್ ಇಲ್ಲ. ಆದರೆ ಇದೆ. ದಯವಿಟ್ಟು ಆ ಹೋಮಿಯೋಪತಿ ಮೆಡಿಸನ್ ಎಲ್ಲಾ ಕಡೆ ಸಿಗುವ ಹಾಗೆ ವ್ಯವಸ್ಥೆ ಮಾಡಿ. ಇನ್ನೊಂದು ವಿಷಯವೆಂದರೆ, ಫಾಗಿಂಗ್ ಮೆಷಿನ್‌ನಿಂದ ಫಾಗಿಂಗ್ ಮಾಡಿದರೆ ಮಸ್ಕಿಟೋ ಬ್ರಿಡಿಂಗ್ ಕಡಿಮೆಯಾಗುತ್ತದೆ ಎಂದು ಹೇಳುತ್ತಾರೆ. ಫಾಗಿಂಗ್ ಮೆಷಿನ್ ಎಲ್ಲಾ ಕಡೆ ಸರಬರಾಜಾಗಲು ಅನುವಾಗುವಂತೆ ಹಣಕಾಸಿನ ವ್ಯವಸ್ಥೆಯನ್ನು ತಾವೇ ಮಾಡಬೇಕು. ಫಾಗಿಂಗ್ ಮೆಷಿನ್‌ಗಳನ್ನು

ಗ್ರಾಮ ಪಂಚಾಯಿತಿಯವರು ಖರೀದಿ ಮಾಡಿ, ತಾಲ್ಲೂಕು ಪಂಚಾಯಿತಿಯವರು ಖರೀದಿ ಮಾಡಿ ಎಂದು ನೀವು ಹೇಳಿದರೆ, ಅದಕ್ಕೆ ಅವರ ಹತ್ತಿರ ಹಣಕಾಸಿನ ಶಕ್ತಿ ಇಲ್ಲ. ಈ ರೋಗ ಬಹಳ ವ್ಯಾಪಕವಾಗಿ ಹಬ್ಬುತ್ತಿದೆ. ಅದಕ್ಕಾಗಿ, ದಯವಿಟ್ಟು ಹೆಚ್ಚಿನ ಹಣಕಾಸಿನ ವ್ಯವಸ್ಥೆಯನ್ನು ಮಾಡಿ ಮತ್ತು ಹೋಮಿಯೋಪತಿ ಔಷಧಿ ಎಲ್ಲಾ ಕಡೆ ಸಿಗುವ ಹಾಗೆ ವ್ಯವಸ್ಥೆಯನ್ನು ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಈ ಕಾಯಿಲೆ ಬಹಳ ಆತಂಕಕಾರಿಯಾದುದು. ಕಾಯಿಲೆ ಬಂದ ಮೂರು ದಿವಸಕ್ಕೆ ಜ್ವರ ಬಿಟ್ಟುಬಿಡುತ್ತದೆ. ಆಮೇಲೆ, ಜಾಯಿಂಟ್ ಪೈನ್, ಕೀಲು ನೋವು, ಊತ ಬಂದುಬಿಟ್ಟರೆ ಅವರು 21 ದಿವಸಗಳಿಂದ ಒಂದು ತಿಂಗಳವರೆಗೂ ಹುಷಾರಾಗುವ ಸ್ಥಿತಿ ಇಲ್ಲ. ಈ ಕಾಯಿಲೆ ಬಂದ ಪೇಷೆಂಟ್‌ಗಳನ್ನೆಲ್ಲಾ ಹೊತ್ತುಕೊಂಡು ಹೋಗಬೇಕು, ಹೊತ್ತುಕೊಂಡು ತರಬೇಕು. ಈ ಕಾಯಿಲೆ ಬಂದವರನ್ನು ಹಳ್ಳಿಗಳಿಂದ ಲಗೇಜ್ ಆಟೋಗಳಲ್ಲಿ ಹಾಕಿಕೊಂಡು ಹೋಗುವುದು, ಲಾರಿಗಳಲ್ಲಿ ಹಾಕಿಕೊಂಡು ಹೋಗುವುದನ್ನು ನೋಡಿಬಿಟ್ಟರೆ, ಮನುಷ್ಯತ್ವ ಇರುವವರ್‍ಯಾರೂ ರಾಜಕಾರಣ ಮಾಡಬಾರದು. ಇದಕ್ಕೆ ಔಷಧದ ಕೊರತೆ ಇದೆ ಎಂದು ನಾವು ಮಾತನಾಡುವುದಿಲ್ಲ. ಔಷಧದ ಕೊರತೆ ಇದೆ ಎಂದು ಈವರೆಗೆ ನನಗೆ ಅನ್ನಿಸಿಲ್ಲ. ಮುಖ್ಯವಾಗಿ ಸ್ಟಾಫ್ ಇಲ್ಲ. ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ನಾನೇ ಕುಳಿತು ಮಾನಿಟರ್ ಮಾಡಿ, ರೂಟ್ ಮಾಡಿಸಿ, ಡಾಕ್ಟರ್‌ಗಳು ಇಂಥಿಂಥ ಹಳ್ಳಿಗಳಿಗೆ ಹೋಗಿ ಎಂದು ನಾವೇ ಎಲ್ಲಾ ಯೋಜನೆ ಮಾಡಿ, ಇದಕ್ಕೆ ವೆಹಿಕಲ್‌ಗಳು ಬೇಕು ಎಂದು ಎಲ್ಲಾ ಡಿಪಾರ್ಟ್‌ಮೆಂಟ್‌ಗಳ ವೆಹಿಕಲ್‌ಗಳನ್ನು ಡ್ರಾ ಮಾಡಿದರೆ, ಅಲ್ಲಿ ಇಂಜೆಕ್ಷನ್ ಕೊಡಲೂ ಸ್ಟಾಫ್ ಇಲ್ಲ. ಕಾಯಿಲೆಯಿದ್ದವರಿಗೆ ಇಂಜೆಕ್ಷನ್ ಕೊಡಬೇಕಾಗುತ್ತದೆ, ಡ್ರಿಪ್ ಹಾಕಬೇಕಾಗುತ್ತದೆ. ಅಲ್ಲಿ ಸ್ಟಾಫ್ ಇಲ್ಲದಿರುವುದರಿಂದ ಅಲ್ಲಿಗೆ ಕಳುಹಿಸಿದಂಥ ನಮ್ಮವರು ಕೇವಲ ಮಾತ್ರೆಗಳನ್ನು ಹಂಚಿಕೊಂಡು ಬರುತ್ತಿರುವುದರಿಂದ, ಜನಗಳು ಇವತ್ತು ಆ ಕ್ಯಾಂಪುಗಳಿಗೆ ಬರುವಂಥ ಸ್ಥಿತಿಯಿಲ್ಲ. ಆದ್ದರಿಂದ, ಏನಾದರೂ ಮಾಡಿ ಟೆಂಪೊರರಿಯಾಗಿಯಾದರೂ ತಾವು ಸ್ಟಾಫನ್ನು ತೆಗೆದುಕೊಳ್ಳಬೇಕು, ಟ್ರೀಟ್‌ಮೆಂಟನ್ನು ಆರಂಭ ಮಾಡಬೇಕು. ಎರಡನೇಯದಾಗಿ, ಈ ಫಾಗಿಂಗ್ ಮೆಷಿನ್ ಎಲ್ಲಿಯೂ ಸಪ್ಲೈ ಇಲ್ಲ. ನಾವೇನಾದರೂ ಪೂನಾಗೆ ಬರೆದರೆ, 2-3 ತಿಂಗಳಾದ ಮೇಲೆ ಕೊಡುತ್ತೇವೆ ಎಂದು ಹೇಳುತ್ತಾರೆ. ಈವರೆಗೆ ಈ ರಾಜ್ಯದಿಂದ ಅಲ್ಲಿಗೆ ಕಳುಹಿಸಿರುವ ಸ್ಯಾಂಪಲ್‌ನ ಒಂದೇ ಒಂದು ರಿಪೋರ್ಟ್ ಬಂದಿಲ್ಲ. ಇದು ಚಿಕೂನ್ ಗುನ್ಯಾನೇ, ಅಲ್ಲವೇ, ಅಥವಾ ಬೇರೆ ಯಾವುದಾದರೂ ವೈರಸ್ ಡಿಸೀಸೇ ಎಂದು ಪರೀಕ್ಷೆ ಮಾಡಿ ಹೇಳಿ ಎಂದು ಕಳುಹಿಸಿರುವ ಸ್ಯಾಂಪಲ್‌ನ ರಿಪೋರ್ಟ್ ಕೂಡ ನಮಗೆ ಬಂದಿಲ್ಲ. ಆದರೆ, ನಾವು ಮಾತ್ರ ಚಿಕೂನ್ ಗುನ್ಯಾ ಎಂದು ಮಾತನಾಡುತ್ತಿದ್ದೇವೆ. ತುರ್ತಾಗಿ ಅಲ್ಲಿಂದ ಒಂದು ರಿಪೋರ್ಟ್ ತರಿಸಿಕೊಳ್ಳಬೇಕು. ಮತ್ತು ಫಾಗಿಂಗ್ ಮೆಷಿನ್‌ಗೆ ಏನಾದರೂ ವ್ಯವಸ್ಥೆಯನ್ನು ಮಾಡಬೇಕು. ಮೂರನೆಯದಾಗಿ, ಗ್ರಾಮ ಪಂಚಾಯಿತಿಯವರು ಕ್ಲೀನ್‌ಲಿನೆಸ್‌ಅನ್ನು ಮೈನ್‌ಟೇನ್ ಮಾಡಬೇಕೆಂದು ತಾವು ಕಟ್ಟುನಿಟ್ಟಿನ ಸೂಚನೆಯನ್ನು ಕೊಡಬೇಕು. ನಾವು ಎಷ್ಟೇ ಸಲ ಹೇಳಿದರೂ ಕಾಯಿಲೆ. 2-3

ದಿವಸಗಳಿಗೆ ಬೇಕು ಎಂದು ಶುದ್ಧ ನೀರನ್ನು ಶೇಖರಣೆ ಮಾಡಿದ್ದರೆ, ಸೊಳ್ಳೆ ಅಲ್ಲಿ ಮೊಟ್ಟೆ ಇಟ್ಟುಬಿಟ್ಟರೆ, ಅಲ್ಲೇ ಬೆಳೆದು ಸೊಳ್ಳೆಯಾಗಿ, ಅದರಿಂದ ಬರುವಂಥ ಕಾಯಿಲೆ ಇದು. ಆ ರೀತಿ ನೀರನ್ನು ಶೇಖರಣೆ ಮಾಡಿ ಇಟ್ಟುಕೊಳ್ಳಬಾರದು ಎಂದು ಹೇಳಿದರೂ ಹಳ್ಳಿಗಳಲ್ಲಿ ಪ್ರತಿನಿತ್ಯ ನೀರು ಬಿಡುವಂಥ ವ್ಯವಸ್ಥೆ ಇಲ್ಲದಿರುವುದರಿಂದ ಆ ರೀತಿ ಮಾಡುತ್ತಾರೆ. ಟ್ಯಾಂಕುಗಳಲ್ಲಿರುವ ರೋಗಕಾರಕ ಕ್ರಿಮಿಗಳನ್ನೇ ನಾವು ನಿರ್ನಾಮ ಮಾಡುವುದಕ್ಕಾಗಿಲ್ಲ. ಒಂದೇ ಒಂದು ಹಳ್ಳಿಯಲ್ಲಿಯೂ ಇವತ್ತು ಟ್ಯಾಂಕನ್ನು ಸ್ವಚ್ಛ ಮಾಡುತ್ತಿಲ್ಲ. ನೀರುಗಂಟಿ ಒಬ್ಬರೂ ಜವಾಬ್ದಾರಿ ತೆಗೆದುಕೊಳ್ಳುತ್ತಿಲ್ಲ. ಪಂಚಾಯಿತಿಯವರು ನಮಗೆ ಸರಿಯಾಗಿ ರೆಸ್ಪಾಂಡ್ ಮಾಡುತ್ತಿಲ್ಲ. ಹಾಗಾಗಿ, ಸರ್ಕಾರದ ಮಟ್ಟದಲ್ಲಿ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಒಂದು ಕಡೆ, ಅವರು ಬಡವರು. ಇನ್ನೊಂದು ಕಡೆ ಅವರು ತಿಂಗಳುಗಟ್ಟಲೆ ನರಳಬೇಕಾದ ಸ್ಥಿತಿ ಇದೆ. 20–25 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಫಾಗಿಂಗ್ ಮೆಷಿನ್ ತೆಗೆದುಕೊಳ್ಳಲಾರದಂಥ ಸ್ಥಿತಿ ರಾಜ್ಯದಲ್ಲಿದೆ ಎಂದು ನಾನು ಭಾವಿಸಿಲ್ಲ. ಆದರೆ ಇವತ್ತು ಸರ್ಕಾರದವರಿಗೆ ಆ ಇಚ್ಛಾಶಕ್ತಿ ಇಲ್ಲ. ನಾವು ಎಷ್ಟು ಸಲ ಹೇಳಿದರೂ ಫಾಗಿಂಗ್ ಮೆಷಿನ್ ತೆಗೆದುಕೊಳ್ಳುತ್ತಿಲ್ಲ, ಫಾಗ್ ಮಾಡುತ್ತಿಲ್ಲ. ಅದರ ಬಗ್ಗೆ ತಾವು ಆಸಕ್ತಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ) : ಮಾನ್ಯ ಅಧ್ಯಕ್ಷರೇ, ನಮ್ಮ ಕಡೆ ಚಿಕೂನ್ ಗುನ್ಯಾ ಬಂದು ಸುಮಾರು 4–5 ತಿಂಗಳ ಮೇಲಾಯಿತು. ಅದರ ನಿಯಂತ್ರಣಕ್ಕೆ ಪ್ರಯತ್ನವೇನೋ ನಡೆಯಿತು. ಮಾನ್ಯ ಸಚಿವರೂ ಬಂದಿದ್ದರು, ಹೆಲ್ತ್ ಕಮೀಷನ್‌ರವರೂ ಬಂದಿದ್ದರು. ಆದರೆ, ಕೆಳಮಟ್ಟದ ಅಧಿಕಾರಿಗಳಿಗೆ ವಿಲ್ ಪವರ್ ಇಲ್ಲ ಎಂದು ನನಗನ್ನಿಸುತ್ತದೆ. ಅಲ್ಲಿ ಸ್ಟಾಫ್‌ಗಳಿಲ್ಲ ಎಂದು ಮಾಧುಸ್ವಾಮಿಯವರು ಹೇಳಿದುದು ಅತ್ಯಂತ ಸತ್ಯಾಂಶದ ಸಂಗತಿ. ತಕ್ಷಣ ಸ್ಟಾಫನ್ನು ರೆಕ್ರೂಟ್‌ಮೆಂಟ್ ಮಾಡಿ, ಅವರಿಗೆ ಆದೇಶ ಕೊಟ್ಟು, ಅವರನ್ನು ಈ ಕೆಲಸಕ್ಕೆ ಹಚ್ಚುವುದಕ್ಕೆ ತಡವೂ ಆಗಬಹುದು. ಅದನ್ನೂ ನಾವು ಅರ್ಥಮಾಡಿಕೊಳ್ಳುತ್ತೇವೆ. ಆದ್ದರಿಂದ, ಈ ಬಗ್ಗೆ ಸರ್ಕಾರಕ್ಕೆ ನಾನು ಸಲಹೆ ಕೊಡುವುದೇನೆಂದರೆ, ಇದರ ಬಗ್ಗೆ ಪರಿಜ್ಞಾನ ಮುಡಿಸುವಂಥಾದ್ದು ಅತ್ಯಂತ ಅವಶ್ಯಕವಾದಂಥಾದ್ದು. ಅಂಗನವಾಡಿ ಕಾರ್ಯಕರ್ತರಿದ್ದಾರೆ, ಶಿಕ್ಷಣ ಇಲಾಖೆಯವರಿದ್ದಾರೆ. ಹೀಗೆ ಬೇರೆ ಬೇರೆ ಇಲಾಖೆಯವರನ್ನು ಇದರಲ್ಲಿ ಸೇರಿಸಿಕೊಂಡು, ಬೇಕಾದರೆ 10–15 ದಿವಸ ಎಲ್ಲಾ ಇಲಾಖೆಗಳ ಕೆಲಸವನ್ನು ಬದಿಗೊತ್ತಿ, ಬರೀ ಇದೊಂದೇ ಕೆಲಸವನ್ನು ತೆಗೆದುಕೊಂಡು, ಹಳ್ಳಿಹಳ್ಳಿಗಳಿಗೆ ಹೋಗಿ ಇದರ ಬಗ್ಗೆ ಪ್ರಜ್ಞೆಯನ್ನು ಮೂಡಿಸುವಂಥ ಕೆಲಸ ಮಾಡಿದರೆ ಬಹುಶಃ ಇದನ್ನು ತಡೆಗಟ್ಟಲು ಸಾಧ್ಯವಾಗಬಹುದು. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಹಳ್ಳಿಗಳಲ್ಲಿರುವ ಆರ್.ಎಂ.ಪಿ.– ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್‌ಗಳಿಗೆ ಮೆಡಿಕಲ್ ಸೈನ್ಸ್‌ನ ಎ.ಬಿ.ಸಿ.ಡಿ. ಗೊತ್ತಿಲ್ಲ. ಅವರು ರಾತ್ರಿ 12–1 ಗಂಟೆಯವರೆಗೂ ಕ್ಲಿನಿಕ್‌ಗಳಲ್ಲಿದ್ದು, ವಿಪರೀತ ದುಡ್ಡು ಮಾಡಿರುವುದನ್ನು ನೋಡಿದರೆ, ಜನ ಎಲ್ಲಿಗೆ ಹೋಗುತ್ತಾರೋ, ಏನಾಗುತ್ತಾರೋ ಎನ್ನುವ ಭಯವೂ ಬರುತ್ತದೆ. ಪಂಚಾಯಿತಿಗಳಿಗೆ ಫಾಗಿಂಗ್ ಮೆಷಿನ್ ಪರ್ಚೇಸ್ ಮಾಡಬೇಕು ಎಂದು ಸರ್ಕಾರದವರು ಹೇಳಿದ್ದಾರೆ. ಎಲ್ಲಿ ಆ

ಮೆಷಿನ್‌ಗಳು ಸಿಗುತ್ತವೆ, ಯಾರು ಮಾರುತ್ತಾರೆ, ಯಾವ ಬ್ರ್ಯಾಂಡ್ ಎನ್ನುವುದ್ಯಾವುದೂ ಪಂಚಾಯಿತಿಗಳವರಿಗೆ ಗೊತ್ತಿಲ್ಲ. ಹಾಗಾಗಿ, ಸರ್ಕಾರಕ್ಕೆ ಇದರ ಬಗ್ಗೆ ಸ್ಪಷ್ಟತೆ ಇಲ್ಲ, ಕಾಳಜಿ ಇಲ್ಲ ಎಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ಏಕೆಂದರೆ, ರಾಜ್ಯದಲ್ಲಿ ಇಷ್ಟೊಂದು ಗಂಭಿರವಾದ ಸಮಸ್ಯೆ ಇದ್ದರೂ ಕೂಡ ಅದಕ್ಕೆ ಮಾಡಬೇಕಾದಷ್ಟು ಪಯತ್ನವನ್ನು ಸರ್ಕಾರದವರು ಮಾಡಿಲ್ಲ. ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಸರ್ಕಾರದ ಎಲ್ಲಾ ಇಲಾಖೆಗಳನ್ನು ಒಂದು ಕಡೆ ಸೇರಿಸಿ, ಸರ್ಕಾರದ ಎಲ್ಲಾ ಮೆಷಿನರಿಯನ್ನು ಒಂದು ಕಡೆ ತಂದು, ಈ ನಿಟ್ಟಿನಲ್ಲಿ ಏನಾದರೂ ಕ್ರಮ ತೆಗೆದುಕೊಂಡರೆ ಇದಕ್ಕೆ ಏನಾದರೊಂದು ಪೂಣ ಪರಿಹಾರವನ್ನು ಕಂಡುಹಿಡಿಯಬಹುದು. ಬಡವರು ಇವತ್ತು ಬಹಳ ಕಷ್ಟದಲ್ಲಿದ್ದಾರೆ. ಅವರು ಒಂದು ಸಲೈನ್ ತೆಗೆದುಕೊಂಡು ಹಚ್ಚಿಕೊಳ್ಳಬೇಕಾದರೂ ಒಬ್ಬೊಬ್ಬರಿಗೆ ಸುಮಾರು 7–8 ಸಾವಿರ ರೂಪಾಯಿ ಖರ್ಚಾಗುತ್ತಿದೆ. ಅನುಕೂಲಸ್ಥರಾದವರು ಪಟ್ಟಣಕ್ಕೆ ಹೋಗಿ ಟ್ರೀಟ್‌ಮೆಂಟ್ ತೆಗೆದುಕೊಂಡು ಬರುತ್ತಿದ್ದಾರೆ. ಆದರೆ ಬಡವರಿಗೆ ಅದು ಸಾಧ್ಯವಾಗುತ್ತಿಲ್ಲ. ಇಮ್ಯುನಿಟಿ ಕಳೆದುಕೊಂಡು ಅನೇಕ ಜನರ ಸಾವು ಕೂಡ ಆಗುತ್ತಿದೆ. ಶಕ್ತಿ ಕಳೆದುಕೊಂಡು, ಅವರು ತಾಳಲಾರದೇ ಸಾವೂ ಕೂಡ ಸಂಭವಿಸುತ್ತಿದೆ. ನಮ್ಮ ತಾಲ್ಲೂಕು ಮೆಡಿಕಲ್ ಆಫೀಸರ್‌ಗಳನ್ನು ಕರೆಸಿ ನಾನು ತಾಲ್ಲೂಕು ಪಂಚಾಯಿತಿ ಸಭೆ ಕರೆದೆ. ಇದರಿಂದ ಸಾವೂ ಕೂಡ ಆಗುತ್ತದೆ ಎನ್ನುವುದನ್ನು ಮೆಡಿಕಲ್ ಆಫೀಸರ್‌ಗಳು ಒಪ್ಪಿಕೊಳ್ಳುತ್ತಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ಇದನ್ನು ನಾನು ಮಾನ್ಯ ಅಶೋಕ್‌ರವರಿಗೂ ಹೇಳಿದೆ. ಇದರಿಂದ ಸಾವೂ ಕೂಡ ಆಗಬಹುದು ಎಂದು ನಿಮ್ಮ ಅಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ. ಇದು ಬಹಳ ಗಂಭೀರವಾದ ವಿಷಯ, ಈ ರೀತಿಯಾದರೆ, ಇನ್ನು ಮುಂದೆ ಈ ರೋಗವನ್ನು ನಿಯಂತ್ರಣ ಮಾಡಲು ಆಗದೇ ಹೋದರೆ, ಬಹಳ ದೊಡ್ಡ ಅನಾಹುತವಾಗುತ್ತದೆ ಎನ್ನುವ ಮಾತನ್ನೂ ಕೂಡ ಮಾನ್ಯ ಆರೋಗ್ಯ ಸಚಿವರಿಗೆ ಹೇಳಿದ್ದೇನೆ, ಅದಕ್ಕಾಗಿ, ಈ ಬಗ್ಗೆ ಸರ್ಕಾರದ ವಿಫಲತೆಯನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ಈ ವಿಷಯದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯನ್ನೂ ಕೂಡ ಕೊಟ್ಟಿದ್ದೇನೆ. ಕೋಲಾರ ಜಿಲ್ಲೆಯಲ್ಲಿ ಮೊಟ್ಟಮೊದಲನೆಯದಾಗಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಚಿಕೂನ್ ಗುನ್ಯಾ ಕಾಣಿಸಿಕೊಂಡಾಗ, ಏನೋ ಜ್ವರ ಬಂದಿದೆ, ವೈರಲ್ ಫೀವರ್ ಇರಬಹುದು ಎಂದು ಡಾಕ್ಟರ್‌ಗಳು ಹೇಳುತ್ತಿದ್ದರು. ಆಗ ನಾನು ಡಿ.ಹೆಚ್.ಓ. ರವರನ್ನು ಕರೆದು, ಇದೇನು ಕಾಯಿಲೆ, ಇದು ಹೇಗೆ ಬಂದಿದೆ ಎಂದು ಕೇಳಿದ ಎಂಟು ದಿವಸಕ್ಕೆ ಇಡೀ ಜಿಲ್ಲೆಯಾದ್ಯಂತ ಬರೀ ಹಳ್ಳಿಗಳಲ್ಲಿ ಮಾತ್ರವಲ್ಲ, ಪ್ರತಿಯೊಂದು ಪಟ್ಟಣಗಳಲ್ಲಿ ಕೂಡ ಈ ರೋಗ ಕಾಣಿಸಿಕೊಂಡಿದೆ. ನಾನು ಮೊನ್ನೆ ಎಂ.ಎಲ್.ಸಿ. ಎಲೆಕ್ಷನ್‌ಗಾಗಿ ಕೆ.ಜಿ.ಎಫ್.ಗೆ ಹೋದಾಗ, ಅಲ್ಲಿ ಕೆಲಸ ಮಾಡುವ ಟೀಚರ್ಸ್‌ಗಳು ಹೇಳುತ್ತಾರೆ. ನಮ್ಮ ಗಂಡಂದಿರಿಗೆ ಹೀಗೆ ಆಗಿದೆ, ಅವರು ಮೈನಿಂಗ್‌ನಲ್ಲಿ ಕೆಲಸ ಮಾಡುತ್ತಿದ್ದರು, ಇದಕ್ಕೆ 500–1000 ರೂಪಾಯಿ ಖರ್ಚಾಗುತ್ತಿದೆ, ನಾವೇನು

ಮಾಡುವುದು ಎಂದು ಕೇಳಿದರು. ನಾನು ಆವತ್ತು ಮತ್ತೆ ಡಿ.ಹೆಚ್.ಓ ರವರನ್ನು ಕರೆಸಿ, ನೀವು ವಾರ್‌ಫುಟಿಂಗ್ ರೀತಿಯಲ್ಲಿ ಸರ್ವೆ ಮಾಡಿಸಿ, ಏನು ಮಾಡಬೇಕೋ ಅದನ್ನು ಮಾಡಿ ಎಂದು ನಾನು ಸೂಚನೆಯನ್ನು ಕೊಟ್ಟೆ. ಇವತ್ತು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಈ ಕಾಯಿಲೆ ಯಥೇಚ್ಛವಾಗಿ ಕಾಣಿಸಿಕೊಳ್ಳುತ್ತಿದೆ. ಇದು ಈವರೆಗೆ ಏಕೆ ಸರ್ಕಾರದ ಗಮನಕ್ಕೆ ಬರಲಿಲ್ಲವೆನ್ನುವುದು ನನಗೆ ಗೊತ್ತಾಗುತ್ತಿಲ್ಲ. ಇದು ಬರೀ ಕೋಲಾರ ಜಿಲ್ಲೆಗೆ ಸೀಮಿತವಾಗಿದೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಇವತ್ತು ಇಲ್ಲಿ ಸದಸ್ಯರುಗಳು ಮಾತನಾಡಿರುದ್ದನ್ನು ನೋಡಿದರೆ, ಇಡೀ ರಾಜ್ಯಾದ್ಯಂತ ಈ ಕಾಯಿಲೆ ಬಂದಿದೆ. ಆದ್ದರಿಂದ, ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸದಿದ್ದರೆ ಮುಂದೆ ಇನ್ನೂ ಏನೇನು ಪರಿಣಾಮಗಳನ್ನು ನಾವು ನೋಡಬೇಕೋ ಗೊತ್ತಿಲ್ಲ. ಮೊನ್ನೆ ನನಗೆ ಮೈ ಸ್ವಲ್ಪ ಬಿಸಿಯಾಗಿದ್ದಾಗ, ಚಿಕೂನ್ ಗುನ್ಯಾ ಬಂದು ಬಿಟ್ಟಿದೆಯನೋ, ಟೆಸ್ಟ್ ಮಾಡಿ ನೋಡುತ್ತೇವೆ ಎಂದು ಹೇಳಿ, ಟೆಸ್ಟ್ ಮಾಡಿ ನೈಸ್ ಟ್ಯಾಬ್ಲೆಟ್ ಕೊಟ್ಟು ಹೋದರು. ಇದು ಇರುವಂಥ ಪರಿಸ್ಥಿತಿ. ಇದರ ಬಗ್ಗೆ ಸರ್ಕಾರ ಸರಿಯಾಗಿ ಗಮನ ಹರಿಸಿಲ್ಲ ಎಂದು ನಾನು ನೇರವಾಗಿ ಹೇಳಲು ಇಚ್ಛೆಪಡುತ್ತೇನೆ. ಇವತ್ತು ಇದಕ್ಕೆ ಔಷಧಿಗಳು ಕೂಡ ಸಿಗುತ್ತಿಲ್ಲ. ಈ ಬಗ್ಗೆ ನಾನು ಡಿ.ಹೆಚ್.ಓ. ರವರನ್ನು ಕೇಳಿದಾಗ, ಕೆಲವು ಜಾಗಗಳಲ್ಲಿ ಔಷಧಿಗಳು ಕಡಿಮೆ ಬರುತ್ತಿವೆ, ನಾವು ಏನು ಮಾಡುವುದು ಎಂದು ಪ್ರಶ್ನೆ ಮಾಡುತ್ತಾರೆ. ಹಾಗಾಗಿ, ಎಲ್ಲಾ ಕೆಲಸಗಳನ್ನು ಬದಿಗೊತ್ತಿ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಈ ಚಿಕೂನ್ ಗುನ್ಯಾ ಕಾಯಿಲೆ ಕಾಣಿಸಿಕೊಂಡಿದೆ, ಅಲ್ಲಿಗೆ ಔಷಧಿಗಳನ್ನು ಇಮ್ಮೀಡಿಯೆಟ್‌ಆಗಿ ಕಳುಹಿಸಬೇಕು. ಈ ಕಾಯಿಲೆ ಬೆಂಗಳೂರಿನಂಥ ಪಟ್ಟಣಗಳಲ್ಲಿ ಇಲ್ಲ ಎಂದು ನನಗನ್ನಿಸುತ್ತಿದೆ. ಹಾಗಾಗಿ, ಇಲ್ಲಿರುವಂಥ ಡಾಕ್ಟರ್‌ಗಳನ್ನು ಅದಕ್ಕೆ ಎಂಗೇಜ್ ಮಾಡಿ. ಇಲ್ಲದಿದ್ದರೆ, ಈ ರಾಜ್ಯದಲ್ಲಿ ಪಿ.ಜಿ. ಕೋರ್ಸ್ ಮಾಡುತ್ತಿರುವಂಥ ಎಲ್ಲಾ ಡಾಕ್ಟರ್‌ಗಳನ್ನು ಹಳ್ಳಿಗಳಿಗೆ ಕಳುಹಿಸುವಂಥ ಕೆಲಸವನ್ನು ಬಹಳ ಆದ್ಯತೆಯ ಮೇಲೆ ಮಾಡಿದರೆ ಮಾತ್ರ ಇದು ಕಂಟ್ರೋಲ್ ಆಗುತ್ತದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ಬಡವರು, ತಮ್ಮ ತಾಳಿಯನ್ನು ಅಡವಿಟ್ಟು, ಕಾಯಿಲೆಯನ್ನು ಗುಣಪಡಿಸಿಕೊಳ್ಳುವ ಪರಿಸ್ಥಿತಿಗೆ ತಲುಪಿದ್ದಾರೆ. ಆದ್ದರಿಂದ ಸರ್ಕಾರ ಈ ಕಡೆ ಹೆಚ್ಚಿನ ಗಮನವನ್ನು ಬೇಗನೆ ಕೊಡಬೇಕು ಎಂದು ತಮ್ಮ ಮೂಲಕ ನಾನು ಹೇಳಲಿಚ್ಛಿಸುತ್ತೇನೆ.

1.00 P .M.

ಅಧ್ಯಕ್ಷರು : ಈ ಬಗ್ಗೆ ಸಾಕಷ್ಟು ಸದಸ್ಯರು ಸಮಗ್ರವಾಗಿ ಮಾತನಾಡಿದ್ದಾರೆ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರು ನಾನು ವೈದ್ಯನಾಗಿ ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಅಧ್ಯಕ್ಷರು : ಈಗ ಎಲ್ಲಾ ಕಡೆ ಚಿಕೂನ್ ಗುನ್ಯಾ ಕಾಯಿಲೆ ಇದೆ. ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಸಮರ್ಥವಾಗಿ ಎಲ್ಲಾ ವಿಚಾರವನ್ನು ಹೇಳಿದ ಮೇಲೆ, ಪುನಃ ಎಲ್ಲರೂ ಮಾತನಾಡಬೇಕೆಂದರೆ ಹೇಗೆ?

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರು, ನಾನು ವೈದ್ಯನಾಗಿ ಒಂದು ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಈ ರೀತಿ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಏನಿದರರ್ಥ? ದಯಮಾಡಿ ಕುಳಿತುಕೊಳ್ಳಿ. ಶೂನ್ಯ ವೇಳೆಯಲ್ಲಿ ಬಹಳ ಪ್ರಮುಖವಾದ ವಿಚಾರ ಎಂದು ನಾನು ಎಲ್ಲರಿಗೂ ಅವಕಾಶ ಕೊಟ್ಟಿದ್ದರೂ ಕೂಡ ನೀವು ಹೀಗೆ ಮಾಡಿದರೆ ಹೇಗೆ? 224 ಜನ ಸದಸ್ಯರಿಗೂ ಅವಕಾಶ ಕೊಡುವುದಕ್ಕಾಗುತ್ತದೆಯೇನು? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಸಮಗ್ರವಾಗಿ ಎಲ್ಲಾ ವಿಚಾರವನ್ನು ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, ದಯಮಾಡಿ ನಾನು ಹೇಳುವುದನ್ನು ಸ್ವಲ್ಪ ಕೇಳಬೇಕು. ಇದು ಇಡೀ ರಾಜ್ಯದಲ್ಲಿ ವ್ಯಾಪಿಸಿಕೊಂಡಿರತಕ್ಕಂಥ ಒಂದು ರೋಗವಾಗಿದೆ. ಇದನ್ನು ತಡೆಗಟ್ಟಲಿಕ್ಕೆ ಇವತ್ತಿನವರೆಗೆ ಪರಿಣಾಮಕಾರಿಯಾಗಿ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಸದಸ್ಯರುಗಳೆಲ್ಲಾ ಈ ಬಗ್ಗೆ ಮಾತನಾಡಬೇಕೆಂದು ಏಕೆ ಕೇಳುತ್ತಿದ್ದಾರೆಂದರೆ, ಅವರವರ ಕ್ಷೇತ್ರಗಳಲ್ಲಿ, ಅವರವರ ಜಿಲ್ಲೆಗಳಲ್ಲಿ ಇದು ವ್ಯಾಪಕವಾಗಿ ಹರಡಿಕೊಂಡಿದೆ. ಪಾಪ, ಅವರು ಜಿಲ್ಲೆಗಳಿಂದ ಬಂದಿದ್ದಾರೆ. ಅವರ ಕ್ಷೇತ್ರಗಳಿಂದ ಬಂದಿದ್ದಾರೆ. ಅವರು ಹೇಳುವುದಕ್ಕೂ ನೀವು ಅವಕಾಶ ಕೊಡುವುದಿಲ್ಲವೆಂದರೆ ಅವರು ಜನರ ಹತ್ತಿರ ಹೋಗಿ ಏನೆಂದು ಹೇಳಬೇಕು? ಭಾರಿ ಕಷ್ಟವಾಗುತ್ತದೆ. ಆದ್ದರಿಂದ, ಮಾನ್ಯ ಹಣಕಾಸು ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಎಲ್ಲರ ಅಭಿಪ್ರಾಯವನ್ನು ಮೊದಲು ಕೇಳಬೇಕು. ಬಹಳ ದೊಡ್ಡ ಸಮಸ್ಯೆ ಏನಾಗಿದೆಯೆಂದರೆ, ಕೂಲಿ ಮಾಡತಕ್ಕಂಥ ಬಡವರಿಗೆ ಈ ಕಾಯಿಲೆ ಬಂದುಬಿಡುತ್ತದೆ. ಅವರು ದಿನನಿತ್ಯ ಕೂಲಿ ಮಾಡಿದರೆ ಮಾತ್ರ ಅವರ ಹೊಟ್ಟೆಗೆ ಊಟ ಸಿಗುತ್ತದೆ, ಬದುಕು ಸಾಕಾಗುತ್ತದೆ. ಅವರು ಕೂಲಿ ಮಾಡದಿದ್ದರೆ ಊಟ ಸಿಗುವುದಿಲ್ಲ. ಜ್ವರ ಬಂದಮೇಲೆ ಮೂರ್‍ನಾಲ್ಕು ದಿವಸಗಳಲ್ಲಿ ಹೋಗುತ್ತದೆ. ಆದರೆ, ಜ್ವರ ಬಿಟ್ಟ ಮೇಲೆ 25 ದಿನ, ಒಂದು ತಿಂಗಳವರೆಗೆ ಕೀಲುಗಳಲ್ಲಾ ನೋವು ಬಂದು ಅವರು ಎಲ್ಲೂ ತಿರುಗಾಡುವುದಕ್ಕಾಗುವುದಿಲ್ಲ. ಇದು ಸಾಂಕ್ರಾಮಿಕ ರೋಗವಾಗಿದ್ದು ಮನೆಮಂದಿಗೆಲ್ಲಾ ಹರಡುತ್ತದೆ. ಇದು ಸೊಳ್ಳೆಗಳಿಂದ ಹರಡುತ್ತದೆಂದು ಹೇಳುತ್ತಾರೆ. ಆ ಸೊಳ್ಳೆಗಳನ್ನು ನಿರ್ಮೂಲ ಮಾಡಲಿಕ್ಕೆ, ಆ ರೋಗ ಮತ್ತೆ ಬಾರದ ಹಾಗೆ ನೋಡಿಕೊಳ್ಳಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ನಾನು ನಿನ್ನೆಯ ದಿವಸ ದಾವಣಗೆರೆಗೆ ಹೋಗಿದ್ದೆ. ಅಲ್ಲಿ 2–3 ಜಿಲ್ಲೆಗಳಿಗೆ ಹೋಗಿದ್ದಾಗ ಬಹಳ ಜನ ನಮ್ಮ ಸ್ನೇಹಿತರುಗಳೆಲ್ಲಾ ಚಿಕೂನ್ ಗುನ್ಯಾ ಆಗಿಬಿಟ್ಟಿದೆ ಎಂದು ಮನೆಬಿಟ್ಟು ಹೊರಗಡೆ ಬರುತ್ತಿಲ್ಲ. ಈ ತರಹ ಇರುವುದರಿಂದ ಇದು ಬಹಳ ಗಂಭೀರ ಸ್ವರೂಪದ ಕಾಯಿಲೆ ಆಗುತ್ತಿದೆ. ಇದು ಎಲ್ಲಾ ಕಡೆ ಹರಡುತ್ತಿದೆ. ಈ ಕಾಯಿಲೆ ಹರಡುವುದನ್ನು ನಿಲ್ಲಿಸದಿದ್ದರೆ ಬಹಳ

ಕಷ್ಟವಾಗುತ್ತದೆ. ಹಣ ಇರುವವರು ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಹೋಗಿ ಔಷಧಿ ತೆಗೆದುಕೊಂಡು ವಾಸಿ ಮಾಡಿಕೊಳ್ಳಬಹುದು. ಆದರೆ, ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿರತಕ್ಕಂಥ ಸಾಮಾನ್ಯ ಜನ, ಬಡವರಿಗೆ ಸರಿಯಾದ ಔಷಧಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗದಿದ್ದರೆ, ಇದರಿಂದ ಬಹಳ ತೊಂದರೆಯಾಗುತ್ತದೆ. ಅದಕ್ಕೆ ನನ್ನ ಒತ್ತಾಯ ಏನೆಂದರೆ ಕೂಡಲೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಇದರ ಬಗ್ಗೆ ಸಮರೋಪಾದಿಯಲ್ಲಿ ಕೆಲಸ ಮಾಡಲಿಕ್ಕೆ ಬೇಕಾದಂಥ ಎಲ್ಲಾ ವ್ಯವಸ್ಥೆಯನ್ನು ಮಾಡಬೇಕು. ಔಷಧಿಗಳನ್ನು ಒದಗಿಸುವುದು, ಹಣ ಒದಗಿಸುವುದು, ಅದಕ್ಕೆ ಬೇಕಾದಂಥ ಔಷಧಿ ಸಿಂಪಡಿಸುವುದಕ್ಕೆ ಏನೇನು ಮಾಡಬೇಕು, ಪಂಚಾಯತ್‌ಗಳು fogging machine ತೆಗೆದುಕೊಂಡು ಸೊಳ್ಳೆಗಳ ನಿರ್ಮೂಲನೆ ಕೆಲಸ ಮಾಡಿ ಎಂದು ಹೇಳಿದ್ದಾರೆ. ಪಂಚಾಯತ್‌ನವರ ಹತ್ತಿರ electric bill, water bill ಕಟ್ಟುವುದಕ್ಕೆ ಹತ್ತಿರ ಹಣವಿಲ್ಲ. ಹೀಗಿರುವಾಗ ನೀವು ತೆಗೆದುಕೊಂಡು ಹೊಡೆಯಿರಿ ಎಂದು ಹೇಳಿದರೆ ಹೊಡೆಯುವುದಕ್ಕೆ ಆಗುತ್ತದೆಯೇ? ನಾಯಿಗೆ ಹೇಳಿದರೆ ನಾಯಿ ಅದರ ಬಾಲಕ್ಕೆ ಹೇಳಿ ಕುಳಿತುಕೊಂಡುಬಿಟ್ಟರೆ ಬಾಲ ಏನು ಮಾಡುತ್ತದೆ? ಆದ್ದರಿಂದ ಈ ತರಹ ಎಲ್ಲಾ ಮಾಡುವುದಕ್ಕಾಗುವುದಿಲ್ಲ. ನಾನು ಇದನ್ನು ಬೇಕು ಎಂದು ಹೇಳುವಂಥ ಮಾತಲ್ಲ. ನಾನು ಅನೇಕ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದಾಗ ಎಲ್ಲಾ ಕಡೆ ದೂರುಗಳು ಬಂದಿವೆ, ಬರುತ್ತಿವೆ. ಕೇರಳ ಭಾಗದ ಪಕ್ಕದಲ್ಲಿ, ಬಾಗೇಪಲ್ಲಿ, ಗೌರಿಬಿದನೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಚಿತ್ರದುರ್ಗದಲ್ಲೆಲ್ಲಾ ಬಹಳ ಜಾಸ್ತಿ ಇದೆ. ಬಾಗಲಕೋಟೆ, ಬಿಜಾಪುರ ಆ ಜಿಲ್ಲೆಗಳ ಭಾಗದಲ್ಲಿ ವ್ಯಾಪಕವಾಗಿ ಹರಡಿರತಕ್ಕಂಥ ಒಂದು ಕಾಯಿಲೆ ಇದಾಗಿದೆ. ಆದರೆ ಇದರ ಬಗ್ಗೆ ನಮಗ್ಯಾರಿಗೂ ಗಂಭೀರತೆಯೇ ಇಲ್ಲ. ಇದೊಂದು serious disease ಅಲ್ಲ ಎನ್ನುವ ರೀತಿಯಲ್ಲಿ ಭಾವನೆ ಇದೆ ಎಂದು ಸರ್ಕಾರ ಭಾವಿಸುವಂಥದ್ದು ಸರಿಯಲ್ಲ. ಆದ್ದರಿಂದ ಇಲ್ಲಿ ಹಣಕಾಸಿನ ಮಂತ್ರಿಗಳು ಇದ್ದಾರೆ. ಆರೋಗ್ಯ ಮಂತ್ರಿಗಳು ಇಲ್ಲ, ಹಣಕಾಸಿನ ಮಂತ್ರಿಗಳು ಅದಕ್ಕೆ ಬೇಕಾದಂಥ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. ಪಂಚಾಯಿತಿಗಳಿಗೆ ವಹಿಸತಕ್ಕಂಥ ಕೆಲಸವನ್ನು ನಿಲ್ಲಿಸಬೇಕು. ಇವರೇ ನೇರವಾಗಿ ಇದೊಂದು ಗಂಭೀರವಾದಂಥ ವಿಚಾರವೆಂದು ಆರೋಗ್ಯ ಇಲಾಖೆ ಮೊದಲು ಬಾರದ ಹಾಗೆ ತಡೆಗಟ್ಟಬೇಕು. ಈ ಕಾಯಿಲೆ ಮುಂದೆ ಬರಬಾರದೆಂಬ ನಿಟ್ಟಿನಲ್ಲಿ ಹಾಗು ಈಗ ಆಗಿರತಕ್ಕಂಥವರಿಗೆ ವಾಸಿ ಮಾಡತಕ್ಕಂಥದ್ದು ಹೇಗೆ ಈ ಎರಡರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಬಡವರಿಗೆ ಇದು ಬಂದುಬಿಟ್ಟರೆ ಪಾಪ 20 ದಿವಸ ಒಂದು ತಿಂಗಳವರೆಗೆ ಅವರು ಮನೆ ಬಿಟ್ಟು ಈಚೆಗೆ ಬರುವ ಹಾಗಿಲ್ಲ. ಕೂಲಿ ಮಾಡತಕ್ಕಂಥ ಜನ, ಈ ಕೂಲಿ ಮಾಡಿಯೇ ಬದುಕತಕ್ಕಂಥವರಿಗೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಬಹುಶಃ ಕೆ.ಆರ್. ಪೇಟೆ ನಿಮ್ಮ ತಾಲ್ಲೂಕಿನಲ್ಲಿ ಬಂದಿದೆಯೋ ಏನೋ ಗೊತ್ತಿಲ್ಲ. ನಿಮ್ಮ ಗಮನಕ್ಕೂ ಬಂದಿರಬಹುದು. ನಮ್ಮ ಜಿಲ್ಲೆಯಲ್ಲಿ ಈಗೀಗ ಒಬ್ಬೊಬ್ಬರಿಗೆ ಚಿಕೂನ್ ಗುನ್ಯಾ ಬಂದಿದೆ. ಇಡೀ ರಾಜ್ಯದಲ್ಲಿ ಈ ಕಾಯಿಲೆ ಇದೆ. ಯಾವ ಜಿಲ್ಲೆಯನ್ನೂ ಸಹ ಇದು ಬಿಟ್ಟಿಲ್ಲ. ಆದ್ದರಿಂದ ನಮ್ಮ ಕೆಲವು ಸದಸ್ಯರು ಹೇಳುವ ಅಭಿಪ್ರಾಯವನ್ನು ಕೇಳಿ ಅದಕ್ಕೆ ಸರ್ಕಾರ

ಒಟ್ಟಿಗೆ ಉತ್ತರ ಕೊಡಲಿ. ಇದಕ್ಕಿಂತ ಮಹತ್ತರವಾದಂಥ ವಿಚಾರ ಚರ್ಚೆ ಮಾಡಬೇಕೆಂದು, ಅದಕ್ಕೆ ಅವಕಾಶ ಕೊಡಬೇಕೆನ್ನುವುದು ಇದ್ದಿದ್ದರೆ ಅದು ಬೇರೆ ವಿಚಾರ. ಆದ್ದರಿಂದ ಇದಕ್ಕೆ ಸ್ವಲ್ಪ ಅವಕಾಶ ಕೊಡುವುದು ಒಳ್ಳೆಯದು ಎಂದು ಮಾನ್ಯ ಸದಸ್ಯರೆಲ್ಲರೂ ಹೇಳುತ್ತಿದ್ದಾರೆ. ಹಾಗೆಯೇ ಸರ್ಕಾರ ಇದಕ್ಕೆ ಕೂಡಲೇ ಸ್ಪಂದಿಸಬೇಕು, ಕೂಡಲೇ ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂಬುದು ನನ್ನ ಒತ್ತಾಯವಾಗಿದೆ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗ ತಾವು ದಯಮಾಡಿ ನಾನು ಹೇಳುವುದನ್ನು ಕೇಳಬೇಕು.

(ಗೊಂದಲ)

ಅಧ್ಯಕ್ಷರು : ಪ್ರತಿಯೊಬ್ಬರೂ ಮಾತನಾಡುವುದಕ್ಕೆ ಈಗ ಹೊಸ ವಿಚಾರ ಏನೂ ಉಳಿದಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲಾ ಕ್ಷೇತ್ರಗಳಲ್ಲಿ ಚಿಕೂನ್ ಗುನ್ಯಾ ಹರಡಿದೆ. ಮಾನ್ಯ ಸದಸ್ಯರುಗಳು ಹೇಳುವುದರಲ್ಲಿ ಹೊಸ ಹೊಸ ವಿಚಾರಗಳೇನೂ ಇಲ್ಲ. ಆದ್ದರಿಂದ ಇದಕ್ಕೆ ಸಮಗ್ರವಾದ ಉತ್ತರವನ್ನು ಸರ್ಕಾರ ಕೊಡಲಿ. (ಗೊಂದಲ) ಏನು sugestin ಕೊಡುತ್ತಾರೆ ಸ್ವಾಮಿ? ಹೀಗಾದರೆ ಸದನವನ್ನು ಹೇಗೆ ನಡೆಸುವುದು? I can't understand.

(ಗೊಂದಲ)

ಡಾ: ಶರಣ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮೊದಲು ಚಿಕೂನ್ ಗುನ್ಯಾ ಕಾಯಿಲೆ ಬಗ್ಗೆ ಪ್ರಸ್ತಾಪ ಮಾಡಿದವನೇ ನಾನು.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಹಿರಿಯರಾದಂಥ ನಾಯಕರು ಪ್ರಸ್ತಾಪವನ್ನು ಮಾಡಿದರು. ಯಾವುದೇ ಸಂದರ್ಭದಲ್ಲಿ ನಮ್ಮ ನಿಯಮಾವಳಿಗಳಲ್ಲಿ ಶೂನ್ಯ ವೇಳೆ ಎನ್ನುವಂಥದ್ದು ಇಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ದಯಮಾಡಿ ಕುಳಿತುಕೊಳ್ಳಿ. ನೀವು ಕುಳಿತುಕೊಳ್ಳುವುದೇ ಇಲ್ಲವೆಂದು ಈ ತರಹ ಮಾಡಿದರೆ ಏನೂ ಮಾಡುವುದಕ್ಕಾಗುವುದಿಲ್ಲ. ಈ ರೀತಿಯಾದರೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ. (ಗೊಂದಲ) ಎಲ್ಲಾ ನಿಯಮಗಳನ್ನು ಉಲ್ಲಂಘನೆ ಮಾಡಿ ನಿಮ್ಮ ಇಷ್ಟಬಂದ ರೀತಿ ನಡೆದುಕೊಳ್ಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ! ದಯಮಾಡಿ ಕುಳಿತುಕೊಳ್ಳಿ ಶ್ರೀ ನಾಗರಾಜ್‌ರವರೇ. ತಾವು ಹಿರಿಯ ಸದಸ್ಯರಿದ್ದೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ....ಶಾಸನ ಸಭೆಯನ್ನು ಮುಂದಕ್ಕೆ ಹಾಕಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಎಲ್ಲದಕ್ಕೂ ಒಂದು ಮಿತಿ ಇದೆ. ನಾನೇನು ಹೇಳಿದೆ ಎಂದರೆ, ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಸಮಯ ಇಲ್ಲ. ಇನ್ನೂ ಅನೇಕ ಪ್ರಮುಖವಾದ ವಿಚಾರಗಳಿವೆ. ಹೊಸ ಹೊಸ ವಿಚಾರ ಹೇಳುವುದೇನೂ ಇಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಈ ಕಾಯಿಲೆ ಹಬ್ಬಿದೆ. ಆದ್ದರಿಂದ ಸರ್ಕಾರದವರು ವಿವರವಾದ ಉತ್ತರವನ್ನು ಕೊಡಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ವಾಸಿ ಮಾಡುವುದಕ್ಕೆ ಏನು ಮಾಡಬೇಕೆಂಬುದನ್ನು ಹೇಳಬೇಕು. ಹಾಗಾದರೆ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ರೀತಿಯಲ್ಲಿ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು : ಈಗ ಶೂನ್ ವೇಳೆ ಪ್ರಶ್ನೆ ಅಲ್ಲ. ಆದರೆ ಸಮಯದ ಪ್ರಶ್ನೆ. ಆದ್ದರಿಂದ ಅವರು ಉತ್ತರ ಕೊಡುತ್ತಾರೆ. ದಯವಿಟ್ಟು ಎಲ್ಲರೂ ಸಹಕರಿಸಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಉತ್ತರ ಕೊಡುತ್ತೇನೆ. ಎಲ್ಲರೂ ಸಮಾಧಾನದಿಂದ ಇರುವುದಕ್ಕೆ ಹೇಳಬೇಕು. ಮಾನ್ಯ ವಾಟಾಳ್‌ರವರೇ, ನಾನು ಉತ್ತರ ಕೊಡುತ್ತೇನೆ. ಇದರಿಂದ ನಿಮಗೆ ಸಮಾಧಾನವಾಗದಿದ್ದರೆ ಯಾರು ಬೇಕಾದರೂ ಪ್ರಶ್ನೆ ಮಾಡಬಹುದಲ್ಲವೇ? ಉತ್ತರ ಕೊಡುವುದಕ್ಕೇ ನನಗೆ ಬಿಡದೇ ಇದ್ದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸರ್ಕಾರದಿಂದ ಅವರು ಉತ್ತರ ಕೊಡಲಿ. ಆಮೇಲೆ ಏನಾದರೂ ನಿಮ್ಮದು ಅನುಮಾನಗಳಿದ್ದರೆ ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲರದ್ದೂ ಒಂದೇ ಅಭಿಪ್ರಾಯವಾಗಿದೆ. ನನ್ನ ಉತ್ತರ ಕೇಳಿ. ಆಮೇಲೆ ಅನುಮಾನಗಳಿದ್ದರೆ ಪ್ರಶ್ನೆ ಕೇಳಬಹುದು.

(ಗೊಂದಲ)

ಅಧ್ಯಕ್ಷರು : ಅವರು ಹೇಳುವ ಉತ್ತರವನ್ನು ಕೇಳಿಸಿಕೊಳ್ಳಿ. ಅವರ ಉತ್ತರದಿಂದ ನಿಮಗೆ ಅನುಮಾನ ಉಳಿದಿದ್ದರೆ ದಯಮಾಡಿ ಆಮೇಲೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗೇನು ನಮ್ಮ ಪ್ರತಿಪಕ್ಷದ ನಾಯಕರು ಮುಂದಿನ ಸಾಲಿನಲ್ಲಿರುವಂಥ ಎಲ್ಲಾ ಪ್ರತಿಪಕ್ಷದ ಮುಖಂಡರು

ಇಡೀ ಸದನ ಏನು ಅಭಿಪ್ರಾಯ ವ್ಯಕ್ತಪಡಿಸಿದೆ, ಈ ವಿಷಯದಲ್ಲಿ ಏನೂ ಭಿನ್ನಾಭಿಪ್ರಾಯವಿಲ್ಲ. ಈ ಚಿಕೂನ್ ಗುನ್ಯಾ ಇಡೀ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿರುವುದು ನಿಜ. ಚಿಕೂನ್ ಗುನ್ಯಾ ಬಗ್ಗೆ ಈ ಮನೆಯಲ್ಲಿ ವ್ಯಾಪಕವಾದಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದಕ್ಕೆ, ನೂರಕ್ಕೆ ನೂರು ನಮ್ಮ ಸಹಮತ ಇದೆ. ಆದರೆ ಸರ್ಕಾರ ಈ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲವೆಂದಲ್ಲ. ಇದರ ಬಗ್ಗೆ war-footing ತರಹ ನಾವು ಕೈಗೆ ತೆಗೆದುಕೊಂಡು ಕೆಲಸ ಮಾಡಿದ್ದೇವೆ. ಸ್ವತಃ ನಮ್ಮ ಆರೋಗ್ಯ ಸಚಿವರಾದ ಶ್ರಿ ಅಶೋಕ್‌ರವರು ನಾಲ್ಕಾರು ಕಡೆಗೆ ಹೋಗಿ, ಬೇರೆ ಬೇರೆ ಜಿಲ್ಲೆಗಳಿಗೆ ಹೋಗಿ ಸಂಬಂಧಪಟ್ಟ ಆರೋಗ್ಯ ಇಲಾಖೆಯವರ ಜೊತೆ ಸಮಾಲೋಚನೆ ಮಾಡಿ ಚರ್ಚೆ ಮಾಡಿದ್ದಾರೆ. ಬೀದರ್ ಜಿಲ್ಲೆಗೆ ಹೋದಾಗ ನಾನು ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಲೋಚನೆ ಮಾಡಿದ್ದೇನೆ. ಬೇರೆ ಬೇರೆ ಕಡೆಯಲ್ಲಿ ನಾನೂ ಸಹ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ನಾಳೆ ಅಥವಾ ನಾಡಿದ್ದು ನಮ್ಮ ಪ್ರತಿಪಕ್ಷದ ನಾಯಕರ ಪ್ರಮುಖರ ಸಭೆ ಕರೆದು ಆರೋಗ್ಯ ಇಲಾಖೆಯಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ನಾವು ಇದುವರೆಗೆ ಏನೇನು ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂಬುದನ್ನು ತಿಳಿಸುತ್ತೇನೆ. ನಿಮ್ಮ ಆಸ್ಪತ್ರೆ ಸ್ಥಿತಿ ಸಿಬ್ಬಂದಿ ಕೊರತೆ ಇವೆಲ್ಲಾ ಎಲ್ಲರಿಗೂ ಗೊತ್ತಿರುವಂಥ ವಿಚಾರ. ಎಲ್ಲರೂ ಸರಿ ಇದೆ ಎಂದು ನಾನು ಹೇಳುವುದಿಲ್ಲ. ಆದರೆ ಈಗ ಅಗತ್ಯವಿದ್ದರೆ ಖಾಸಗಿ ವೈದ್ಯರನ್ನೂ ಸಹ ಉಪಯೋಗ ಮಾಡಿಕೊಂಡು ಅಥವಾ ಎಲ್ಲಿ ಚಿಕೂನ್ ಗುನ್ಯಾ ಇಲ್ಲ ಅಂಥ ಕಡೆಯಿಂದ ಡಾಕ್ಟರುಗಳನ್ನು ಬೇರೆ ಕಡೆಗೆ ಕಳುಹಿಸಿಕೊಟ್ಟ ಇದನ್ನು control ಮಾಡುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಅದಕ್ಕೆ ನಾಳೆ ಅಥವಾ ನಾಡದ್ದು ಸಭೆ ಕರೆಯುತ್ತೇವೆ. ಈ fogging machine ಬಗ್ಗೆ ಎಲ್ಲೆಲ್ಲಿ........

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ,

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೀಗ ಉತ್ತರ ಕೊಡುತ್ತೇನೆ. ನಿಂತಿದ್ದೇನೆ. ಆಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸರ್ಕಾರಕ್ಕೆ ನಾನೊಂದು ಸಲಹೆ ಕೊಡಬೇಕೆಂದಿದ್ದೇನೆ. ಚಿಕೂನ್ ಗುನ್ಯಾ ಕಾಯಿಲೆ ಬಗ್ಗೆ ಮೊನ್ನೆ 4 ದಿನಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶಾಸಕರುಗಳ ಸಭೆಯನ್ನು ಅಭಿವೃದ್ಧಿ ದೃಷ್ಟಿಯಿಂದಾಗಿ ಚರ್ಚೆ ಮಾಡಬೇಕೆಂದು ಕರೆದಿದ್ದರು. ಆ ಸಭೆಯನ್ನು ಕರೆದಂಥ ಸನ್ನಿವೇಶದಲ್ಲಿ ನಮ್ಮ ಈ ಸಭೆಯ ಸದಸ್ಯರಾಗಿರತಕ್ಕಂಥ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಮತ್ತು ಇತರೆ ಸದಸ್ಯರುಗಳು ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ರಾಜ್ಯದ ಇತರೆ ಜಿಲ್ಲೆಗಳಿಗೆ ಯಾವ ರೀತಿ ಇದೊಂದು ಸಾಂಕ್ರಾಮಿಕ ರೋಗವಾಗಿ ಹಬ್ಬುತ್ತಿದೆ ಎಂಬುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ಅದೇ ರೀತಿಯಲ್ಲಿ ಇದು ಬಹಳ ವ್ಯಾಪಕವಾಗಿ ಹಬ್ಬುತ್ತಿದೆ. ಅದು ಮನುಷ್ಯನನ್ನು

ಸುಮಾರು 15, 20 ದಿನಗಳ ಕಾಲ ಕೆಲಸ ಮಾಡದೇ ಇರುವ ಹಾಗೆ ಮಾಡುತ್ತದೆ. ಅದರಿಂದಾಗಿ, ಇದರ ಬಗ್ಗೆ ಏನಾದರೊಂದು ಕ್ರಮ ತೆಗೆದುಕೊಳ್ಳಬೇಕೆನ್ನತಕ್ಕಂಥ ಒತ್ತಾಯವನ್ನು ಮಾಡಿದ್ದರು. ಆ ಸಭೆಯಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇರಲಿಲ್ಲವೆಂದು ಕಾಣುತ್ತದೆ. ಅವರ ಇಲಾಖೆಯ ಅಧಿಕಾರಿಗಳು ಇದ್ದರು. ಅವರು ನಾವು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದರು. ನಾನು ಕಳೆದ 10 ದಿನಗಳಿಂದ ನನ್ನ ಕ್ಷೇತ್ರದ ಪ್ರವಾಸದಲ್ಲಿದ್ದೇನೆ. ಆ ಸಂದರ್ಭದಲ್ಲಿ ನಮ್ಮಲ್ಲಿರತಕ್ಕಂಥ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ ಸಹ ನಾನು ಭೇಟಿಯನ್ನು ಕೊಟ್ಟಿದ್ದೇನೆ. ವೈದ್ಯರುಗಳಿಲ್ಲ, ಸಿಬ್ಬಂದಿಗಳಿಲ್ಲ ಇವೆಲ್ಲಾ ಕೊರತೆಗಳನ್ನು ತಕ್ಷಣ ಸರ್ಕಾರದವರು ನೀಗಿಸಬೇಕೆಂಬ ಅಪೇಕ್ಷೆಯನ್ನು ನಾನೂ ಸಹ ಮಾಡುವುದಿಲ್ಲ. ಅದಕ್ಕೆ ನಮ್ಮದೇ ಆದ ವ್ಯವಸ್ಥೆಯಲ್ಲಿ ತೊಂದರೆಗಳಿರುತ್ತವೆ. ಈಗ ತುರ್ತಾಗಿ ಆಗಬೇಕಾಗಿರುವಂಥದ್ದು ಇಷ್ಟೆ, ಈಗ ಕನಕಪುರ ತಾಲ್ಲೂಕು ಒಂದರಲ್ಲೇ ಸುಮಾರು 50 ಸಾವಿರ ಜನರಿಗೆ ಈ ಕಾಯಿಲೆ ಬಂದಿದೆ. ನಾನು ಇವತ್ತು ಬೆಳಗ್ಗೆ ನಿಮಗೆ ದೂರವಾಣಿ ಮೂಲಕ ಮಾತನಾಡಿ, ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು ಎಂದು ಕೇಳಿದ್ದೆ. ನಾನು ಬರುವುದು ಸ್ವಲ್ಪ ತಡವಾಯಿತು. ಈಗ ಅವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ಉಪ ಮುಖ್ಯಮಂತ್ರಿಗಳು yield ಆಗಿದ್ದಾರೆ. ಅವರು ದಯಮಾಡಿ ಕೇಳಿಸಿಕೊಳ್ಳಬೇಕಾಗಿರುವುದು ಇಷ್ಟೆ, ತಾವು ಸನ್ಮಾನ್ಯ ವಿವಿಧ ಪಕ್ಷಗಳ ನಾಯಕರುಗಳನ್ನು, ವಿರೋಧ ಪಕ್ಷದ ನಾಯಕರುಗಳನ್ನು ಕರೆಸಿ ಮಾತನಾಡತಕ್ಕಂಥದ್ದು, ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳತಕ್ಕಂಥದ್ದು ಒಂದು ಭಾಗ. ಆದರೆ, ಅದಕ್ಕಿಂತ ಬಹಳ ಪ್ರಮುಖವಾಗಿ ಆಗಬೇಕಾಗಿರುವುದು, ಜಿಲ್ಲಾ ಪಂಚಾಯಿತಿ ವ್ಯವಸ್ಥೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನೇರವಾಗಿ ನೀವು ನಿಯಂತ್ರಣ ಮಾಡುವುದು ಕಷ್ಟವಾಗುತ್ತದೆ. ಮಾನ್ಯ ಅಶೋಕ್‌ರವರು ಹೋಗಿ ಅನೇಕ ಕಡೆಗಳಲ್ಲಿ ನೋಡಿರತಕ್ಕಂಥದ್ದು ನಿಜ. ಇವರು ಜಿಲ್ಲಾಧಿಕಾರಿಗಳಿಗೆ ಹೇಳಿದ್ದಾರೆ. ನಾನು ಅಧಿಕಾರಿಗಳಿಂದ ತಿಳಿದುಕೊಂಡಿರುವ ಪ್ರಕಾರವಾಗಿ, ಮಾನ್ಯ ಮುಖ್ಯಮಂತ್ರಿಗಳು ಕೊಡತಕ್ಕಂಥ ಸೂಚನೆ ಏನಿದೆ ಅಥವಾ ಮಾನ್ಯ ಸಂಬಂಧಪಟ್ಟ ಮಂತ್ರಿಗಳು ಕೊಡತಕ್ಕಂಥ ಸೂಚನೆ ಏನಿದೆ, ಇದಕ್ಕೆ ಕವಡೆ ಕಿಮ್ಮತ್ತೂ ಸಹ ಇಲ್ಲ. ಅಲ್ಲಿರತಕ್ಕಂಥ ಆರೋಗ್ಯ ಇಲಾಖೆಯ ಕಾರ್ಯದರ್ಶಿಗಳು ಏನೂ ಸಹ ಇದುವರೆಗೂ ಕ್ರಮವನ್ನು ತೆಗೆದುಕೊಂಡಿಲ್ಲ. ನಾಳೆ ನೀವು ವಿರೋಧ ಪಕ್ಷದ ನಾಯಕರುಗಳನ್ನು ಕರೆದಾಗ ಏನೇನು circular ಗಳ ಮೂಲಕ ಈ ಕಾಯಿಲೆಗೆ ಸಂಬಂಧಪಟ್ಟಹಾಗೆ ಇಲಾಖಾ ಮುಖ್ಯಸ್ಥರುಗಳಿಗೆ ತಿಳಿಸಿದ್ದೀರಾ ಎಂಬುದನ್ನು ಹೇಳಿ. ಆ ಇಲಾಖೆಯ ಮುಖ್ಯಸ್ಥರು 2 ತಿಂಗಳಲ್ಲಿ ನಿವೃತ್ತಿಯಾಗುತ್ತೇನೆಂದು ಹೇಳಿ ಅವರಿಗೆ ನಮ್ಮಂಥವರು ದೂರವಾಣಿ ಮೂಲಕ ಹೇಳಿದರೂ ಸಹ ಅವರು ಕೇರ್ ಮಾಡುವುದಿಲ್ಲ. ನಿಮ್ಮ D.H.O. ಗಳು ಈ ಸರ್ಕಾರದ ಮಾತುಗಳನ್ನು ಕೇಳುವುದಿಲ್ಲ. ಇದು ಇಷ್ಟೊಂದು ವ್ಯಾಪಕವಾಗಿ ಸಾಂಕ್ರಾಮಿಕ ರೋಗವಾಗಿ ಹಬ್ಬುತ್ತಿದೆ, Deputy Commissioner ಗಳು ಒಬ್ಬರಾದರೂ ಸಹ ಇದನ್ನು serious ಆಗಿ ತೆಗೆದುಕೊಂಡು

ಒಂದು ಸಭೆ ಮಾಡಿಲ್ಲ. ನೆಲಮಂಗಲ ತಾಲ್ಲೂಕಿನಲ್ಲಿ ಮಾತ್ರ ಅಲ್ಲಿರತಕ್ಕಂಥ ಶಾಸಕರು initiative ತೆಗೆದುಕೊಂಡಿರುವುದರಿಂದ ಒಂದಷ್ಟು awareness ಅನ್ನು ಸ್ತ್ರೀಶಕ್ತಿ ಸಂಘಗಳ ಮೂಲಕ ಮಾಡಿಸಿದ್ದಾರೆ. ಆದ್ದರಿಂದ, ದಯಮಾಡಿ ಇದನ್ನು ತಡೆಗಟ್ಟಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಾವು ಶಾಸಕರುಗಳು ಏನು ಮಾಡಬೇಕು ಹೇಳಿ? ನಾವು ನಿಮ್ಮ ಸರ್ಕಾರದ ಜೊತೆಯಲ್ಲಿದ್ದು, ಸರ್ಕಾರ ಕಾರಣವೆಂದು ನಾನು ಹೇಳುವುದಿಲ್ಲ. ಒಂದು, ಹಣಕಾಸನ್ನು ಬಿಡುಗಡೆ ಮಾಡಬೇಕು. ಔಷಧಿ ತೆಗೆದುಕೊಳ್ಳುವ ಹಾಗೆ ಮಾಡಬೇಕು. ಮತ್ತೆ ತಾವೇ ಹೇಳಿದಹಾಗೆ, ಸಂಘ–ಸಂಸ್ಥೆಗಳು, Medical College ಗಳು Private Sector ನಲ್ಲಿವೆ. ದೊಡ್ಡ ದೊಡ್ಡ Nursing Home ಗಳಿವೆ. ಅಲ್ಲಿಂದ ವೈದ್ಯರುಗಳನ್ನು ತೆಗೆದುಕೊಳ್ಳಿ. ಎಲ್ಲಾ ಸರ್ಕಾರವೇ ಮಾಡಬೇಕೆಂದು ಹೇಳುವುದಿಲ್ಲ. ಆದರೆ, ಯಾವ ಪ್ರಮಾಣದಲ್ಲಿ ವ್ಯಾಪಕವಾಗಿ Deputy Commissioner ಗಳು ಮಾಡಬೇಕಾಗಿತ್ತು. C.E.O. ಗಳು ಮಾಡಬೇಕಾಗಿತ್ತು ಆ ರೀತಿಯಲ್ಲಾಗುತ್ತಿಲ್ಲ. They are not caring for your orders. ಅದಕ್ಕೆ ದಯಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ವಿನಂತಿ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಾನ್ಯ ಹಿರಿಯ ಸದಸ್ಯರಾದಂಥ ಪಿ.ಜಿ.ಆರ್. ಸಿಂಧ್ಯಾರವರು ಈ ಸರ್ಕಾರದ ಮಂತ್ರಿಗಳ ಸೂಚನೆಗೆ ಕವಡೆ ಕಿಮ್ಮತ್ತಿಲ್ಲವೆಂದೇನು ಹೇಳಿದರು. ಇದು ಸತ್ಯಕ್ಕೆ ದೂರವಾದಂಥ ಸಂಗತಿ.

ಶ್ರೀ ಆಲಂಗೂರು ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ.......

ಅಧ್ಯಕ್ಷರು : ಆಮೇಲೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪೂರ್ತಿ ಹೇಳುತ್ತೇನೆ ಸಾರ್. ನಾನು ಮಾತನಾಡುವುದಕ್ಕೇ ಅವಕಾಶ ಕೊಡದಿದ್ದರೆ ಹೇಗೆ? ನಾನು ಮಾತನಾಡಿದ ಮೇಲೆ ಅವರು ಮಾತನಾಡಲಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡಿದ ಮೇಲೆ ನೀವು ಮಾತನಾಡಿ.

(ಗೊಂದಲ)

ಶ್ರೀ ಆಲಂಗೂರು ಶ್ರೀನಿವಾಸ್ : ನೀವು ಇದನ್ನು ಉಪಯೋಗ ಮಾಡಬೇಕಾಗಿದ್ದರೆ Private Nursing Schools ಇವೆ.

(ಗೊಂದಲ)

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ. ಅವರು ಮಧ್ಯದಲ್ಲಿ ಉತ್ತರ ಕೊಡುತ್ತಿದ್ದಾರೆ. ಮಧ್ಯೆ ಮಧ್ಯೆದಲ್ಲಿ ಒಬ್ಬೊಬ್ಬರು ಎದ್ದರೆ ಏನು ಮಾಡುವುದಕ್ಕಾಗುತ್ತದೆ? ಎಲ್ಲರೂ

ಅರ್ಥಮಾಡಿಕೊಳ್ಳಬೇಕು. (ಗೊಂದಲ) ಅರ್ಥ ಮಾಡಿಕೊಳ್ಳದಿದ್ದರೆ ಯಾವುದನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಲಂಗೂರು ಶ್ರೀನಿವಾಸ್ ಕುಳಿತುಕೊಳ್ಳಿ. ನಿಮ್ಮನ್ನು ಕರೆದಿಲ್ಲ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಈಗ ನಾನು ನಿಮಗೊಂದು ಪ್ರಶ್ನೆ ಹೇಳುತ್ತೇನೆ. ಕೇಳಿ ದಯಮಾಡಿ ಬಹಳ ತಡವಾಗಿ ಬಂದಿದ್ದೀರೋ ಏನೋ ಗೊತ್ತಾಗಲಿಲ್ಲ. ಕೇಳಿ ದಯಮಾಡಿ. ಈಗ ದಯಮಾಡಿ ಕುಳಿತುಕೊಳ್ಳಿ ಸ್ವಾಮಿ.

ಶ್ರೀ ಆಲಂಗೂರು ಶ್ರೀನಿವಾಸ್ : ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಈಗ ಬಹಳ ಜನ ಸದಸ್ಯರು ಎದ್ದು ನಿಂತುಕೊಂಡು ಎಲ್ಲರಿಗೂ ಅವಕಾಶ ಕೊಡಬೇಕೆಂದು ಕೇಳಿದರು. ಆದರೆ, ಹೊಸ ಹೊಸ ವಿಚಾರವೇನಿಲ್ಲ. ಕೇಳಿ ದಯಮಾಡಿ. ಆದ್ದರಿಂದ ಮಂತ್ರಿಗಳು ಉತ್ತರ ಕೊಡಲಿ. ಆನಂತರ ಏನಾದರೂ ನಿಮ್ಮ doubts ಇದ್ದರೆ ಅನಂತರ ಕೇಳಿ ಎಂದು ಹೇಳಿದೆ. ಅವರು ನಿಂತುಕೊಂಡರು. ಮಧ್ಯದಲ್ಲಿ ಸಿಂಧ್ಯರವರು ಮಾತನಾಡಿದರು. ಹೀಗೆ ಎಲ್ಲರೂ ಕೇಳಿದರೆ ಹೇಗೆ? ಆಮೇಲೆ ಕೇಳುವಿರಂತೆ ಕುಳಿತುಕೊಳ್ಳಿ. ದಯಮಾಡಿ ಮೊದಲು ಅವರು ಉತ್ತರ ಕೊಡಲಿ.

(ಗೊಂದಲ)

ಅಧ್ಯಕ್ಷರು : ಆಗಲಿ ಸ್ವಾಮಿ, ಆಮೇಲೆ ಕೇಳುವಿರಂತೆ ಕುಳಿತುಕೊಳ್ಳಿ.

ಶ್ರೀ ಆಲಂಗೂರ್ ಶ್ರೀನಿವಾಸ್ : ಜನ ಅಲ್ಲಿ ಸಾಯುತ್ತಿದ್ದಾರೆ ಸ್ವಾಮಿ. ಇಂಥ ಸಂದರ್ಭದಲ್ಲಿ ಯಾವ್ಯಾವ ಜನರಿಂದ ಅಭಿಪ್ರಾಯ ತೆಗೆದುಕೊಂಡು ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಿ. ಅದನ್ನು ಬೇಡವೆಂದು ಹೇಳುವುದಿಲ್ಲ. ಈಗ ನಾನು ಹೇಳುವುದು ಇಷ್ಟೇ, ಈಗ Nursing Schools ಇವೆ. ಆಮೇಲೆ, Medical College ನಲ್ಲಿ students ಇದ್ದಾರೆ. ತಕ್ಷಣ ಇವರೆಲ್ಲರನ್ನೂ ಕೂಡ ಹಳ್ಳಿಗಳಿಗೆ ಕಳುಹಿಸಬೇಕು. ಹಳ್ಳಿಗಳಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋದರೂ staff ಇಲ್ಲವೆಂದು ಹೇಳುತ್ತಾರೆ. ಒಂದೊಂದು ಗ್ರಾಮದಲ್ಲಿ 150 ರಿಂದ 200 ಜನ patients ಇರುತ್ತಾರೆ. ಅವರೆಲ್ಲಾ ಬಡವರು. ಆದ್ದರಿಂದ, ನಾನು ತಮ್ಮ ಮೂಲಕ ಉಪ ಮುಖ್ಯಮಂತ್ರಿಗಳನ್ನು ಕೇಳುವುದಿಷ್ಟೆ, ನೀವು ಏನೇ ಆಗಲಿ ಎಲ್ಲೆಲ್ಲಿ ನಮ್ಮ schools ಇವೆಯೋ, colleges ಇವೆಯೋ, ತಕ್ಷಣ ಅಲ್ಲಿನವರನ್ನು bus ಮುಖೇನ ಕಳುಹಿಸಿ.

(ಗೊಂದಲ)

ಅಧ್ಯಕ್ಷರು : ಆಯಿತು, ಯಾರ್‍ಯಾರು ಇದ್ದೀರೋ ಮಾತನಾಡಬಹುದು. ಏಕೆಂದರೆ, ಯಾರೋ ಒಬ್ಬರಿಗೆ ಪ್ರಮುಖರೆಂದು ಅವಕಾಶ ಕೊಟ್ಟರೆ ಇನ್ನೊಬ್ಬರು ನಮಗೆ ಕೊಡಲಿಲ್ಲವೆನ್ನುವುದು ಬೇಡಿ. ನೀವೆಲ್ಲಾ ಮಾತನಾಡಬಹುದು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಈ ಸಲ ನಾನೇಕೆ ಕೇಳುತ್ತಿದ್ದೇನೆಂದರೆ, ಈ ಸದನದಲ್ಲಿ ನಾನು........

ಅಧ್ಯಕ್ಷರು : ಮತ್ತೆ ನಾನು ಇನ್ನೇನು ಮಾಡುವುದಕ್ಕಾಗುತ್ತದೆ? ಎಲ್ಲಾ ಮಾತನಾಡಿ. ಒಂದನೇ ಸಾಲು, ಎರಡನೆ ಸಾಲು ಎಂದು ನಾನು ಯಾರನ್ನೂ ತಡೆಯುವುದಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಕಳೆದ sitting ನಲ್ಲಿ ಈ ಚಿಕೂನ್ ಗುನ್ಯ ಬಗ್ಗೆ ಈ ಸದನದಲ್ಲಿ ಮೊದಲು ಪ್ರಸ್ತಾಪ ಮಾಡಿದ್ದು ನಾನೇ. ಆಗ ಸರ್ಕಾರ ಇದರ ಬಗ್ಗೆ serious ಆಗಿ ತೆಗೆದುಕೊಳ್ಳಲಿಲ್ಲ. ಮೊದಲು ಗುಲಬರ್ಗಾ ಜಿಲ್ಲೆಯಲ್ಲಿ ಚಿಕೂನ್ ಗುನ್ಯಾ ವ್ಯಾಪಕವಾಗಿ ಹಬ್ಬಿತ್ತು. ಅದನ್ನು ಯಾವ ರೀತಿ ತಡೆಗಟ್ಟಬೇಕು ಎಂದು ಹೇಳಿ ಮಾನ್ಯ ಆರೋಗ್ಯ ಸಚಿವರು ಬಂದಿದ್ದರು. ಆದರೆ, ಕೆಲವೊಂದು ನಿರ್ದಿಷ್ಟವಾಗಿರತಕ್ಕಂಥ ಕ್ರಮಗಳನ್ನು ಇದರಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಹೊಸದಾಗಿ ಏನೂ ಇಲ್ಲವೆಂದು ನೀವು ತಿಳಿದುಕೊಳ್ಳಬೇಡಿ. ಎರಡು ವಿಷಯಗಳು ಬಹಳ ಪ್ರಮುಖವಾಗಿವೆ. ಮಾನ್ಯ ಸಚಿವರು ಗಮನ ಕೊಡಬೇಕು. ಮೊದಲನೆಯದು, ಈ ರೋಗಕ್ಕೆ ನೀವು treatment ಕೊಡುವುದಕ್ಕಿಂತ ಇದನ್ನು ಯಾವ ರೀತಿಯಾಗಿ ತಡೆಗಟ್ಟಬೇಕೆನ್ನುವಂಥದ್ದು ಬಹಳ ಮುಖ್ಯ. ಅದನ್ನು ತಡೆಗಟ್ಟಬೇಕದರೆ ಈ ರೋಗ mosquito Aids Egyptie ಎನ್ನುವಂಥ ಒಂದು fresh water ನಲ್ಲಿ breed ಆಗತಕ್ಕಂಥ mosquito ಅದು. ಹೊಲಸು ನೀರಿನಲ್ಲಲ್ಲ. ಪ್ರಮುಖವಾಗಿರತಕ್ಕಂಥದ್ದು ಎಂದರೆ, ಮನೆಯೊಳಗೆ ಇರತಕ್ಕಂಥ ನೀರು. ಕ್ಯಾನ್‌ಗಳಲ್ಲಿ, drum ಗಳಲ್ಲಿ, barrel ಗಳಲ್ಲಿ ನಿಂತಿರತಕ್ಕಂಥ ನೀರನ್ನು ಮೇಲೆ cover ಮಾಡಬೇಕು. ಇದರ ಬಗ್ಗೆ ಸರ್ಕಾರವೇನಾದರೂ ಹೇಳಿದೆಯೇ? ಎರಡನೆಯದು, ನೀವು fogging ಮಾಡಬೇಕೆಂದು ಹೇಳಿ ಒಂದು circular ಕೊಟ್ಟಿದ್ದೀರಿ. Fogging ಯಾವ ರೀತಿ ಮಾಡಬೇಕು ಎಂಬ ನಿರ್ದಿಷ್ಟವಾಗಿರತಕ್ಕಂಥ ಸೂಚನೆಯನ್ನು ಕೊಟ್ಟಿಲ್ಲ. ಏಕೆಂದರೆ, ಇದರಲ್ಲಿ ಹೊರಗಡೆ fogging ಮಾಡಿದರೆ ಏನೂ ಆಗುವುದಿಲ್ಲ ಅಧ್ಯಕ್ಷರೆ. ಅದಕ್ಕೆ in-house fogging ಎಂದು ಹೇಳುತ್ತಾರೆ. ಪ್ರತಿಯೊಂದು ಮನೆಯೊಳಗಡೆಯೂ ನೀವು fogging ಮಾಡಬೇಕು. ನೀವು ಪ್ರತಿಯೊಂದು ಮನೆಯೊಳಗೂ fogging ಮಾಡಿದರೆ ಮಾತ್ರ ಈ mosquito ವನ್ನು control ಮಾಡಬಹುದು. ಒಂದುವೇಳೆ, ನಿವು mosquito control ಮಾಡದೇ ಇದ್ದರೆ, ಈ ರೋಗವನ್ನು ಮುಂದೆ ತಡಗಟ್ಟಲಿಕ್ಕಾಗುವುದಿಲ್ಲ. ಏಕೆಂದರೆ, ಇದರಲ್ಲಿ ಯಾವುದೇ ಒಂದು viral fever ಒಂದು ಸಾರಿ ಆದರೆ ಇನ್ನೊಂದು ಸಾರಿ ಆಗುವುದಿಲ್ಲ. ಆದರೆ, ಚಿಕೂನ್ ಗುನ್ಯಾದಲ್ಲಿ relapse ಆಗತಕ್ಕಂಥದ್ದು ಕಂಡು ಬಂದಿದೆ. ಅಂದರೆ, ಒಂದು ಸಾರಿ ಯಾರಿಗೆ ಈ ಜ್ವರ ಬರುತ್ತದೆ ಇನ್ನೊಂದು ಸಾರಿ ಬರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಮತ್ತೆ ಅವರಿಗೆ ಆ mosquito ಕಚ್ಚಿದರೆ ಮತ್ತೊಂದು ಸಾರಿ affect ಆಗಬಹುದು. ಅದಕ್ಕಾಗಿ ಇದಕ್ಕೆ ನೀವು ಯುದ್ಧೋಪಾದಿಯಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ಕೇವಲ ಆರೋಗ್ಯ ಇಲಾಖೆ ಮಾತ್ರವಲ್ಲ, ಇವತ್ತು ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಪ್ರತಿಯೊಂದು ಗ್ರಾಮಗಳಲ್ಲಿ ಗ್ರಾಮ ಸಭೆ ಮಾಡಿ, ನಿಂತಿರುವ ನೀರನ್ನು ನೀವು cover ಮಾಡಬೇಕು ಅಥವಾ ಖಾಲಿ ಮಾಡಬೇಕು. ಇದರ ಬಗ್ಗೆ ನೀವು ಸೂಚನೆ ಕೊಡಬೇಕು.

ಅಧ್ಯಕ್ಷರು : ಸಲಹೆ ಕೊಟ್ಟಿದ್ದೀರಿ. ಬೇರೆಯವರು ಮಾತನಾಡಲಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಆಮೇಲೆ ಜಿಲ್ಲಾವಾರು ಹಣವನ್ನು ಬಿಡುಗಡೆ ಮಾಡಿಲ್ಲ. ಇದರ ಬಗ್ಗೆ ಸರ್ಕಾರ ಗಮನವನ್ನು ಕೊಡಬೇಕು. ಏಕೆಂದರೆ, ಯಾರೂ project ಮಾಡುತ್ತಿಲ್ಲ. ಔಷಧಿಗೋಸ್ಕರ ಹಣ ಬಿಡುಗಡೆ ಮಾಡುತ್ತಿಲ್ಲ. ಈ ಕಾಯಿಲೆಗೆ ವಿಶೇಷವಾಗಿರತಕ್ಕಂಥ ಟ್ಯಾಬ್ಲೆಟ್ಸ್ ಬೇಕಾಗಿಲ್ಲ. ಇದಕ್ಕೇ ಕೇವಲ ಸಿಂಟಮ್ಯಾಟಿಕ್ ಟ್ರೀಟ್‌ಮೆಂಟ್ ಇದ್ದರೂ ಕೂಡ ಇವತ್ತಿನದಿವಸ ಏನಾಗಿದೆ ಎಂದರೆ, ಬಡವರು ಒಂದು ತಿಂಗಳ ಕಾಲದವರೆಗೆ ಕೆಲಸ ಮಾಡುವುದಕ್ಕೆ ಆಗದ ರೀತಿಯಲ್ಲಿ ಈ ಚಿಕೂನ್ ಗುನ್ಯಾ ಕಾಯಿಲೆಯಿಂದ ಆಗುತ್ತಿದೆ. ಆದ್ದರಿಂದ, ಇದನ್ನು ಕಂಟ್ರೋಲ್ ಮಾಡುವುದಕ್ಕೋಸ್ಕರ ಇದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಬಿಡುಗಡೆ ಮಾಡಬೇಕು. ಮತ್ತೆ ಇದನ್ನು ಕಂಟ್ರೋಲ್ ಮಾಡುವುದಕ್ಕೋಸ್ಕರ ಪ್ರತಿಯೊಂದು ಗ್ರಾಮಪಂಚಾಯಿತಿಗೆ ಒಂದೊಂದು ಫಾಗಿಂಗ್ ಮೆಷಿನ್ ಖರೀದಿ ಮಾಡಿ ಕೊಡಬೇಕು. ಫಾಗಿಂಗ್ ಮೆಷಿನ್‌ನ್ನು ಗ್ರಾಮಪಂಚಾಯತ್‌ಗಳಿಗೆ ಕೊಡದೇ ಇದ್ದರೆ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಮಾಸ್ಕಿಟೋ ಬ್ರೀಡಿಂಗ್ ಡಿಸೀಸ್‌ಗಳಾದ ಮಲೇರಿಯಾ ಆಗಿರಲಿ Filaria ಆಗಿರಲಿ ಅಥವಾ ಡೆಂಗ್ಯು ಜ್ವರಗಳೆಲ್ಲವನ್ನೂ ಕಂಟ್ರೋಲ್ ಮಾಡುವುದಕ್ಕೆ ಫಾಗಿಂಗ್ ಮೆಷಿನ್ ಬೇಕಾಗುತ್ತದೆ.

ಅಧ್ಯಕ್ಷರು : ಇನ್ನು ಬಹಳ ಜನ ಸದಸ್ಯರು ಮಾತನಾಡಬೇಕೆಂದಿದ್ದಾರೆ. ಆದರೆ, ನೀವು ಗಂಟೆಗಟ್ಟಲೆ ಮಾತನಾಡಿದರೆ ಹೇಗೆ?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಇದರ ಬಗ್ಗೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬುದರ ಬಗ್ಗೆ ಮತ್ತು ಎಷ್ಟು ಹಣ ಬಿಡುಗಡೆ ಮಾಡಿದ್ದಾರೆಂಬುದನ್ನು ಮಾನ್ಯ ಆರ್ಥಿಕ ಮಂತ್ರಿಗಳು ಹೇಳಬೇಕಾಗುತ್ತದೆ. ಅಂದರೆ, ಇದಕ್ಕೋಸ್ಕರ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಮತ್ತು ಯಾವ ರೀತಿಯಾಗಿ ಉಪಯೋಗಿ ಮಾಡಲಾಗಿದೆ ಎಂಬುದರ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ನೆ.ಲ. ನರೇಂದ್ರ ಬಾಬು (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಬಹಳ ದುರಂತವೆಂದರೆ ಈ ಸದನದ ಸದಸ್ಯರಾಗಿರತಕ್ಕಂಥ ಮಾಜಿ ಸಚಿವರು ಆಗಿರತಕ್ಕಂಥ ಡಾ: ನಾಗಪ್ಪನವರ ಹತ್ತಿರ ನಾನು ದೂರವಾಣಿ ಮೂಲಕ ಮಾತನಾಡಿದಾಗ ನನಗೂ ಕೂಡ ಚಿಕೂನ್ ಗುನ್ಯಾ ಅಟ್ಯಾಕ್ ಆಗಿದೆ ಎಂದು ಹೇಳಿದರು. ದಯವಿಟ್ಟು ಇದರ ಬಗ್ಗೆ ವೆರಿಫೈ ಮಾಡಕೊಳ್ಳಿ. ಬೆಂಗಳೂರು ನಗರದ ಸುಬ್ರಹ್ಮಣ್ಯ ನಗರ, ಗಾಯಿತ್ರಿ ನಗರ, ಕಮಲ ನಗರ, ರಾಜಾಜಿನಗರ ಪ್ರದೇಶ ಮತ್ತು ಬೆಂಗಳೂರು ನಗರದ ಇತರೇ ಪ್ರದೇಶಗಳಲ್ಲಿ ಚಿಕೂನ್ ಗುನ್ಯಾ ಕಾಯಿಲೆ ಅಟ್ಯಾಕ್ ಆಗಿದೆ. ಇದರ ಬಗ್ಗೆ ಎಂಹೆಚ್, ಡಿಹೆಚ್‌ಓ ಗಳನ್ನು ನಾನು ಕೇಳಿ, ಇದು ನಿಮ್ಮ ಗಮನಕ್ಕೆ ಬಂದಿಲ್ಲವೇ ಎಂದು ಕೇಳಿದಾಗ ನಮ್ಮ

ಗಮನಕ್ಕೆ ಯಾವುದು ಬಂದಿಲ್ಲವೆಂದು ಹೇಳಿದರು. ಏಕೆಂದು ಕೇಳಿ ಅವರನ್ನು ಕರೆದುಕೊಂಡು ಪೇಶೆಂಟ್ ಮನೆಗಳಿಗೆ ಹೋಗಿ ನೀವು ಎಲ್ಲಿ ಚಿಕಿತ್ಸೆ ಪಡೆಯುತ್ತಿದ್ದೀರೆಂದು ಕೇಳಿದ್ದಕ್ಕೆ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಮತ್ತು ಕ್ಲೀನಿಕ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇವೆಂದು ಹೇಳಿದರು. ಸುಮಾರು 75 ರಿಂದ 80 ಲಕ್ಷ ಜನರು ವಾಸಿಸುವಂಥ ಇಂತಹ ಬೆಂಗಳೂರು ನಗರಗಳಲ್ಲಿ ಇದರ ಬಗ್ಗೆ ಸಮಾರೋಪಾದಿಯಲ್ಲಿ ಎಚ್ಚರಿಕೆ ವಹಿಸಬೇಕು. ಇವತ್ತಿನದಿವಸ ಇದರ ಬಗ್ಗೆ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಮತ್ತು ಕ್ಲಿನಿಕ್‌ಗಳಲ್ಲಿ ರಿಪೋರ್ಟ್ ಆಗುತ್ತಿವೆ. ಮತ್ತೆ ಈ ಕಾಯಿಲೆಗೆ ಸಂಬಂಧಪಟ್ಟಂತೆ ಬ್ಲಡ್ ಸ್ಯಾಂಪಲ್ ತೆಗೆದುಕೊಂಡು ಟೆಸ್ಟ್ ಮಾಡುವುದಕ್ಕೆ ಒಬ್ಬರಿಗೆ ಸುಮಾರು ಒಂದು ಸಾವಿರ ರೂಪಾಯಿಗಳಿಂದ 1450 ರೂಪಾಯಿ ಚಾರ್ಜ್ ಮಾಡುತ್ತಿದ್ದಾರೆ. ಇಷ್ಟು ಹಣವನ್ನು ಬಡವರು ಕೊಡುವುದಕ್ಕೆ ಸಾಧ್ಯವಿದೆಯೇ? ದಯವಿಟ್ಟು ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಬೆಂಗಳೂರು ನಗರದಲ್ಲಿರತಕ್ಕಂಥ ಎಲ್ಲರೂ ಕೂಡ ಖಾಸಗಿ ಆಸ್ಪತ್ರೆಗಳ ವೆಚ್ಚವನ್ನು ಭರಿಸುವುದಕ್ಕೆ ಸಾಧ್ಯವಿಲ್ಲ. ಇದರಿಂದ ಬಡವರು ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ ಇಷ್ಟು ಹೊತ್ತು ಮಾನ್ಯ ಸದಸ್ಯರು ಹೇಳಿದ ಹಾಗೆ ಪ್ರಿವೆಂಟಿವ್ ಮೆಷರ್ಸ್‌ಗೆ ಸಂಬಂಧಪಟ್ಟಂತೆ ಕ್ರಮ ತೆಗೆದುಕೊಳ್ಳಬೇಕು ಮತ್ತೆ ಇದಕ್ಕೆ ಫಾಗಿಂಗ್ ಮೆಷಿನ್‌ನಿಂದ ಸ್ಪ್ರೇ ಮಾಡುತ್ತಾರೆ. ಇವತ್ತಿನದಿವಸ ಇದರಿಂದ ಏನಾಗಿದೆ ಎಂದರೆ ಬೀದಿಯಲ್ಲಿರತಕ್ಕಂಥ ಸೊಳ್ಳೆಗಳೆಲ್ಲಾ ಮನೆಯೊಳಗೆ ಬರುತ್ತಿವೆ. ಆದ್ದರಿಂದ ಎರಡು ಕಡೆ ಫಾಗಿಂಗ್ ಮೆಷಿನ್‌ನಿಂದ ಸ್ಪ್ರೇ ಆಗಬೇಕಾಗುತ್ತದೆ. ಹಾಗೆಯೇ ಮಾಸ್ಕ್ವಿಟೋ ಬ್ರೀಡಿಂಗ್ ಪಾಯಿಂಟ್ಸ್‌ನ್ನು ಗುರುತು ಮಾಡಿ ಇದರ ಬಗ್ಗೆ ಪ್ರೈಮರಿ ಹೆಲ್ತ್ ಅವೇರ್‌ನೆಸ್ ತರಬೇಕೆಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಇನ್ಯಾರೂ ಮಾತನಾಡುವವರು ಇಲ್ಲವೆ? ಶಿವರಾಜ ಸಜ್ಜನ್‌ರವರೇ, ತಾವು ಮಾತನಾಡಿ.

ಶ್ರೀ ಶಿವರಾಜ ಸಜ್ಜನರ್ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಚಿಕೂನ್ ಗುನ್ಯಾಗೆ ಸಂಬಂಧಪಟ್ಟಂತೆ ಈಗಾಗಲೇ ಸಾಕಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಆದರೆ, ನನ್ನ ಸಮಸ್ಯೆ ಬೇರೆಯಾಗಿದೆ. ಅದೇನೆಂದರೆ, ಹಾವೇರಿ ನಗರದಲ್ಲಿ ಒಬ್ಬ ಕರಿಮರಿ ಮಠ್ ಎಂಬ ವೈದ್ಯ ನಮ್ಮ ಜಿಲ್ಲೆಯ ಡಿಹೆಚ್‌ಓ ರವರ ಫೋಟೋವನ್ನು ದುರುಪಯೋಗಪಡಿಸಿಕೊಂಡು ಚಿಕೂನ್ ಗುನ್ಯಾ ರೋಗವನ್ನು ಕೇವಲ ಒಂದೇ ದಿವಸದಲ್ಲಿ ನಿವಾರಣೆ ಮಾಡುತ್ತೇನೆಂದು ಇದರ ಬಗ್ಗೆ ಒಂದು ಸಭೆ ಮಾಡಿ ಆ ಸಭೆಯ ಫೋಟೋಗಳನ್ನು ಹಾಕಿ ಎಲ್ಲಾ ಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟಿದ್ದಾನೆ. ಅಂದರೆ, 24 ಗಂಟೆಯೊಳಗಾಗಿ ಈ ರೋಗವನ್ನು ನಿವಾರಣೆ ಮಾಡುತ್ತೇನೆಂಬುದು ಎಲ್ಲಾ ಪತ್ರಿಕೆಗಳಲ್ಲಿ ಬಂತು. ಮರುದಿವಸ ಆ ರೋಗ ಅಟ್ಯಾಕ್ ಆದವರು ಮತ್ತು ಬಾರದೆ ಇರುವವರೆಲ್ಲರೂ ಆ ಡಾಕ್ಟರ್‌ನ ಆಸ್ಪತ್ರೆ ಮುಂದೆ ದೊಡ್ಡ ಕ್ಯೂ ನಿಂತರು. ಈ ವಿಷಯ ಪತ್ರಿಕೆಯಲ್ಲಿ ಬಂದ ನಂತರ ನಾವು ಡಿಹೆಚ್‌ಓ ರವರ ಹತ್ತಿರ ಹೋಗಿ ಆತ ನಡೆಸಿರುವ ಸಭೆಯಲ್ಲಿ ನೀವು ಭಾಗವಹಿಸಿದರೋ ಹೇಗೆ

ಎಂದು ಕೇಳಿದೆವು. ಆ ಸಭೆಗೆ ನಾನು ಹೋಗಿಲ್ಲ ಆದರೆ, ಆ ಡಾಕ್ಟರ್ ನನ್ನ ಫೋಟೋವನ್ನು ದುರುಪಯೋಗಪಡಿಸಿಕೊಂಡು ಪತ್ರಿಕೆಗಳಲ್ಲಿ ಪ್ರಚಾರವನ್ನು ಗಿಟ್ಟಿಸಿಕೊಂಡಿದ್ದಾನೆಂದು ಅವರು ಉತ್ತರವನ್ನು ಕೊಟ್ಟಿದ್ದಾರೆ. ಮತ್ತೆ ಈ ಕರಿಮರಿ ಮಠ್ ಎನ್ನುವ ಒಬ್ಬ ವೈದ್ಯ ನಮ್ಮನ್ನು ಮತ್ತು ಸಾಮಾನ್ಯ ಜನರಿಗೂ ಕೂಡ ಚೀಟ್ ಮಾಡುತ್ತಿರುವುದು ಇವತ್ತಿನದಿವಸ ಎದ್ದು ಕಾಣುತ್ತಿದೆ ಎಂದು ಪೊಲೀಸ್ ಇಲಾಖೆಗೆ ಹೋಗಿ ಪ್ರೆಸ್‌ನವರು ದೂರು ಕೊಟ್ಟಿದ್ದಾರೆ. ಆದರೆ, ದುರ್ದೈವ ಏನೆಂದರೆ, ಇವತ್ತಿನವರೆಗೆ ಆ ವೈದ್ಯನ ಮೇಲೆ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ಈ ರೀತಿಯಾದ ನಕಲಿ ವೈದ್ಯರಿಂದ ಈ ರಾಜ್ಯದಲ್ಲಿ ಅಮಾಯಕ ಜನರು ತುತ್ತಾಗುತ್ತಿದ್ದಾರೆ. ಇವತ್ತಿನದಿವಸ ಅಮಾಯಕ ಜನರು ಬಲಿ ಆಗತಕ್ಕಂಥದ್ದನ್ನು ತಪ್ಪಿಸಬೇಕಾದರೆ ಇಂಥ ವೈದ್ಯರ ಮೇಲೆ ತುರ್ತು ಕ್ರಮ ಜರುಗಿಸಬೇಕು. ಅಂದರೆ, ಅಂಥವರನ್ನು ತಕ್ಷಣ ಅರೆಸ್ಟ್ ಮಾಡಿ ಅವರ ಆಸ್ಪತ್ರೆಯನ್ನು ಸೀಜ್ ಮಾಡಬೇಕೆಂದು ಈ ಸದನದ ಮುಖಾಂತರ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ.ಎಸ್. ಬಸವರಾಜ್ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಚಿಕೂನ್ ಗುನ್ಯಾ ವಿಷಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಜನರು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಮಾನ್ಯ ಸಿದ್ದರಾಮಯ್ಯನವರು ಹೇಳಿರತಕ್ಕಂಥದ್ದು ನಿಜವಾಗಿಯೂ ಕೂಡ ಹೆಮ್ಮೆಯ ವಿಚಾರ. ಈ ಒಂದು ಕಾಯಿಲೆ ಪಾವಗಡದಿಂದ ಪ್ರಾರಂಭ ಆಗಿ ಕರ್ನಾಟಕ ರಾಜ್ಯವಾದನಂತರ ದಕ್ಷಿಣ ಭಾರತಕ್ಕೂ ಕೂಡ ಈ ಒಂದು ಕಾಯಿಲೆ ಹಬ್ಬಿದೆ. ಇದರ ಬಗ್ಗೆ ಶಾಸಕರಿಗೆ ಅನುಭವ ಇಲ್ಲ. ಏಕೆಂದರೆ ಚಿಕೂನ್ ಗುನ್ಯಾ ಕಾಯಿಲೆಯಿಂದ ನರಳುತ್ತಿರುವ ವ್ಯಕ್ತಿಗಳು ಕೈಯಿಂದ ಬ್ರಶ್ ಮಾಡುವುದಕ್ಕೆ ಮತ್ತು ಬರೆಯುವುದಕ್ಕೂ ಕೂಡ ಆಗುತ್ತಿಲ್ಲ. ಮತ್ತೆ ನರಗಳು ವೀಕ್ ಆಗತಕ್ಕಂಥದ್ದು ಮತ್ತು ಜಾಯಿಂಟ್ ಪೇನ್ ಆಗುವುದರಿಂದ ಓಡಾಡುವುದಕ್ಕೂ ಕೂಡ ಆಗುತ್ತಿಲ್ಲ. ಇದು ಎಲ್ಲಾ ಕಡೆ ಬಂದಿದೆ ಎಂದು ಮಾನ್ಯ ಅಧ್ಯಕ್ಷರು ಹೇಳಿದರು. ಆದರೆ, ಇದು ಶಾಸಕರಿಗೆ ಮತ್ತು ಸಚಿವರಿಗೆ ಬಂದಿಲ್ಲ. ಇದರಿಂದ ಆಗತಕ್ಕಂಥ ಒಂದು ತೊಂದರೆ ಅವರಿಗೆ ಗೊತ್ತಾಗಬೇಕಾದರೆ ಇದು ಎಲ್ಲರಿಗೂ ಬರಬೇಕಾಗಿದೆ. ಈ ದೃಷ್ಟಿಯಿಂದ ಸರ್ಕಾರ ಒಂದು ತುರ್ತು ಕ್ರಮ ತೆಗೆದುಕೊಳ್ಳಬೇಕಾದರೆ ಇವತ್ತಿನದಿವಸ ಶಾಸಕರಾಗಲಿ ಅಥವಾ ಸಚಿವರಿಗೆ ಬಂದಾಗ ಮಾತ್ರ ಇದು ಗೊತ್ತಾಗುತ್ತದೆ. ಆದರೆ, ಇವತ್ತಿನದಿವಸ ಸಾಮಾನ್ಯ ರೈತರಿಗೆ ಬಂದಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದು ಹೇಳಬೇಕಾಗುತ್ತದೆ. ಹಿಂದೆ ಮಲೇರಿಯಾ ಬರುತ್ತಿತ್ತು. ಆ ಸಂದರ್ಭದಲ್ಲಿ ಮಲೇರಿಯಾ ಡಾಕ್ಟರ್ ಎನ್ನತಕ್ಕಂಥವರು ಮನೆ ಮನೆಗೆ ಹೋಗಿ ಗೋಡೆಯ ಮೇಲೆ ಬರೆದು ಬರುತ್ತಿದ್ದರು ಮತ್ತೆ ಮಲೇರಿಯಾಗೆ ಮಾತ್ರೆಗಳನ್ನು ಕೊಡುತ್ತಿದ್ದರು. ಆದ್ದರಿಂದ ಪ್ರತಿಯೊಂದು ಗ್ರಾಮಕ್ಕೆ ಹೋಗತಕ್ಕಂಥದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಇದೊಂದು ವೈರಲ್ ಡಿಸೀಸ್. ಈ ಒಂದು ಕಾಯಿಲೆ ಇಡೀ ರಾಜ್ಯದಲ್ಲಿ ಹಬ್ಬಿದೆ. ಮುಖ್ಯವಾಗಿ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಹೇಳುವುದೇನೆಂದರೆ ಇದರ ಕ್ಯೂರ್‌ಗಿಂತ ಪ್ರಿಕಾಶನ್ ಬಹಳ

ಮುಖ್ಯವಾಗಿದೆ. ನಾನು ಮೊನ್ನೆದಿವಸ ನನ್ನ ಊರಿಗೆ ಹೋದಾಗ ಐದಾರು ಹಳ್ಳಿಗಳಿಗೆ ಹೋಗಿ ಬಂದೆ. ಇದಕ್ಕೆ ಕೆಲವು utarny organisations ಹುಬ್ಬಳ್ಳಿಯಿಂದ ಹೋಮಿಯೋಪತಿ ಟ್ಯಾಬ್ಲೆಟ್ಸ್‌ನ್ನು ತರಿಸಿ ಉಚಿತವಾಗಿ ಕೊಟ್ಟಿದ್ದಾರೆ. ಇದನ್ನು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಮತ್ತೆ ನಾನು ಡಿಹೆಚ್‌ಓ ರವರ ಜೊತೆ ಮಾತನಾಡಿದ್ದೇನೆ. ಅವರೂ ಕೂಡ ತಕ್ಷಣ ಕೆಲವು ಕಡೆ ಭೇಟಿ ಮಾಡಿದ್ದಾರೆ. ಇವತ್ತು ಮುಖ್ಯವಾಗಿ ಅಗ್ರಿಕಲ್ಚರ್ ಸೀಜನ್. ಈ ಸಂದರ್ಭದಲ್ಲಿ ರೈತರೆಲ್ಲರೂ ಕೂಡ ಗದ್ದೆಯಲ್ಲಿರಬೇಕಾಗಿರುತ್ತಿತ್ತು. ಆದರೆ, ಇವತ್ತು ಅವರೆಲ್ಲರೂ ಮನೆಯಲ್ಲಿದ್ದಾರೆ. ನಾನು ಮೊನ್ನೆದಿವಸ ಊರಿಗೆ ಹೋದಾಗ ಅಲ್ಲಿರತಕ್ಕಂಥ ಆಸ್ಪತ್ರೆಯಲ್ಲಿ ಕಾಲಿಡುವುದಕ್ಕೆ ಜಾಗ ಇರಲಿಲ್ಲ. ಅಲ್ಲಿ ಸುಮಾರು 140 ರಿಂದ 150 ಜನ ಇದ್ದರು. ಮತ್ತೆ ಇನ್ನೂ ಜನ ಬರುತ್ತಿದ್ದರು. ಈ ರೀತಿಯಾದಾಗ ಡಾಕ್ಟರ್ ಕೂಡ ಏನು ಮಾಡುವುದಕ್ಕೆ ಸಾಧ್ಯವಿದೆ? ಇವತ್ತು ಮುಖ್ಯವಾಗಿ ಈ ಕಾಯಿಲೆ ಬಂದಿದೆ. ಇದನ್ನು ನೀವು ತಂದಿದ್ದೀರೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಯಾವುದೇ ಸರ್ಕಾರ ಏನು ಒಂದು ಪ್ರಯತ್ನ ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ತಕ್ಷಣ ಮೆಡಿಸಿನ್ಸ್ ಸರಬರಾಜು ಆಗಬೇಕು. ಹಾಗೆಯೇ ಸಲೈನ್ ಕೂಡ ಬಹಳ ಕೊರತೆ ಇದೆ. ಆದ್ದರಿಂದ ಇವೂ ಕೂಡ ಸರಬರಾಜು ಆಗಬೇಕು. ಮತ್ತೆ ಪ್ರಿಕಾಶಿನ್ ಮೆಜರ್ಸ್ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಹಳ್ಳಿಗಳಲ್ಲಿರುವ ಮನೆಗಳಲ್ಲಿ ಮುರ್ನಾಲ್ಕು ಜನ ಅದೇ ನೀರನ್ನು ಕುಡಿಯುತ್ತಾರೆ. ಇನ್ನು ಫುಡ್ ಬಗ್ಗೆ ಹೇಳುವುದಾದರೆ, ಹಳ್ಳಿಗಳಲ್ಲಿ ಬಿಸಿ ಊಟ ಮಾಡುವವರು ಬಹಳ ಕಡಿಮೆ. ಇಂಥ ಎಲ್ಲಾ ಕಾರಣಗಳಿಂದ ಈ ಒಂದು ಕಾಯಿಲೆ ಎಲ್ಲಾ ಕಡೆ ಸ್ಪ್ರೆಡ್ ಆಗುತ್ತಿದೆ. ಆದ್ದರಿಂದ, ಕೇವಲ ಹೆಲ್ತ್ ಡಿಪಾರ್ಟ್‌ಮೆಂಟ್ ಅಷ್ಟೇ ಅಲ್ಲದೆ ಬೇರೆ ಬೇರೆ ಇಲಾಖೆಗಳ ಸಹಕಾರ ಹಾಗೂ ಸ್ಥಳೀಯ ಪಂಚಾಯತ್‌ಗಳ ಸಹಕಾರ ತೆಗೆದುಕೊಂಡು ಅಂದರೆ ಎಲ್ಲರ ಸಹಕಾರ ತೆಗೆದುಕೊಂಡು ಜನರಿಗೆ ತಿಳುವಳಿಕೆ ಕೊಡಬೇಕಾಗುತ್ತದೆ. ಈ ಒಂದು ಕಾಯಿಲೆಯನ್ನು ಕಂಟ್ರೋಲ್ ಮಾಡಬೇಕಾದರೆ ಯಾವ ರೀತಿಯಾದ ಪ್ರಿಕಾಶನ್‌ಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಹಳ್ಳಿ ಮತ್ತು ಪಟ್ಟಣದ ಜನರಿಗೆ ಮನ[illegible]ಗಿ ಮಾಡಿಕೊಡಬೇಕು. ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ಬಡವರು ಸುಮಾರು 10 ರಿಂದ 15 ದಿನಗಳವರೆಗೆ ಮನೆಯಲ್ಲಿ ಮಲಗಿದರೆ, ಅವರಿಗೆ ಯಾರು ಕೂಲಿ ಕೊಡುತ್ತಾರೆ? ಈ ಒಂದು ಕಾಯಿಲೆಯಿಂದ ಬಹಳ ಸೀರಿಯಸ್ ಆಗತಕ್ಕಂಥ ಅಪಾಯ ಆಗುವುದಿಲ್ಲವೆಂದು ಯಾರೋ ಒಬ್ಬ ಡಾಕ್ಟರ್ ನನಗೆ ಹೇಳಿದರು. ಆದರೆ ಇದರಿಂದ ಇವತ್ತಿನದಿವಸ ಹ್ಯಾಂಡಿಕ್ಯಾಪ್ ಆಗಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ತಕ್ಷಣ ಸರ್ಕಾರ ಬೇರೆ ಬೇರೆ ಇಲಾಖೆಗಳಿಂದ ಇದರ ಬಗ್ಗೆ ತಿಳುವಳಿಕೆ ತೆಗೆದುಕೊಂಡು, ಫಾಗ್ ಮೆಷಿನ್ಸ್ ಮತ್ತು ಮೆಡಿಸಿನ್ಸ್ ಸರಬರಾಜು ಮಾಡಬೇಕು. ಮತ್ತೊಂದು ಕಡೆ ಇದರ ಬಗ್ಗೆ ಜನರಿಗೆ ತಿಳುವಳಿಕೆ ಕೊಟ್ಟು ಎಚ್ಚರಿಕೆ ವಹಿಸಬೇಕೆಂದು ತಿಳಿಸುವಂಥ ಕೆಲಸ ಆಗಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ರಾಜೇಂದ್ರನ್ (ಕೆಜಿಎಫ್) : ಮಾನ್ಯ ಅಧ್ಯಕ್ಷರೆ, ಈ ಚಿಕೂನ್ ಗುನ್ಯಾ ಒಂದು ಫ್ಯಾಶನ್ ಆಗಿಬಿಟ್ಟಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜೇಂದ್ರನ್‌ರವರು ರಾಷ್ಟ್ರೀಯ ನಾಯಕರಾಗಿದ್ದಾರೆ. ಅಂದರೆ, ಅವರು ಆರ್.ಪಿ.ಐ. ಪಾರ್ಟಿಗೆ ಪ್ರೆಸಿಡೆಂಟ್ ಆಫ್ ಇಂಡಿಯಾ ಆಗಿದ್ದಾರೆ. ಆದ್ದರಿಂದ ಅವರಿಗೆ ನಾವು ಅಭಿನಂದನೆ ಸಲ್ಲಿಸಬೇಕಾಗಿದೆ.

ಶ್ರೀ ಎನ್. ರಾಜೇಂದ್ರನ್ : ಥ್ಯಾಂಕ್ಸ್. ಮಾನ್ಯ ಅಧ್ಯಕ್ಷರೆ, for so many days not able to see ..... ಎಂದು ನಾವು ಯಾರನ್ನಾದರೂ ಹೋಗಿ ಕೇಳಿದರೆ ಅವರ ಸ್ಟೈಲ್ ಏನೆಂದರೆ ಚಿಕೂನ್ ಗುನ್ಯಾ ಎಂಬ ಒಂದೇ ಉತ್ತರವಾಗಿದೆ. ಇದು ಚಿಕೂನ್ ಗುನ್ಯಾನ ಅಥವಾ ಚಿಕ್ಕನ್ ಗುನ್ಯಾನಾ? next ಮಟನ್ ಗುನ್ಯಾ ಬರುತ್ತದೆ. ಮತ್ತೆ ಹಂದಿ ಗುನ್ಯಾ ಕೂಡ ಬರುತ್ತದೆ. About medicines, Several times we have brought to the notice of te Hon'ble Health Minister. ತಕ್ಷಣ ಕಳುಹಿಸಿಕೊಡುತ್ತೇವೆಂದು ಹೇಳುತ್ತಾರೆ. ಆದರೆ, ಅಲ್ಲಿ ಕೇವಲ ಗ್ಲೂಕೋಸ್ ವಾಟರ್ ಕೂಡ ಇಲ್ಲ. ಮೆಡಿಸಿನ್ಸ್ ಕೊಡತಕ್ಕಂಥದ್ದು ಬಿಡಿ. ಕೊನೇಪಕ್ಷ ಆತನಿಗೆ 10 ದಿವಸ ಗ್ಲೂಕೋಸ್ ಕೊಡಬೇಕೆಂದರೆ ಅಲ್ಲಿ there is no glucose water. ಇದಕ್ಕೆ ಸಂಬಂಧಪಟ್ಟಂತೆ ಡಿಸ್ಟ್ರಿಕ್ ಹೆಲ್ತ್ ಆಫೀಸರ್‌ನವರನ್ನು ಕೇಳಿದರೆ ನಮಗೆ ಇಷ್ಟೇ ಬಂದಿರುವುದು ನಾವು ಏನು ಮಾಡುವುದಕ್ಕೆ ಆಗುತ್ತದೆಂದು ಹೇಳುತ್ತಾರೆ. ಆದರೆ, ಬೇಕಾದಷ್ಟು ಮೆಡಿಸಿನ್ಸ್‌ನ್ನು ಕೊಟ್ಟಿದ್ದೇವೆಂದು ಪತ್ರಿಕೆಗಳಲ್ಲಿ ಬಂದಿದೆ. ಎಲ್ಲಿ ಕಟ್ಟಿದ್ದೀರಿ? You have not given. ನಾವು ಸಿ.ಎಂ.ಓ. ರವರ ಹತ್ತಿರ ಹೋಗಿ ಕೇಳಿದಾಗ ಅವರ ಉತ್ತರ ಏನೆಂದರೆ, "No medicine has come, what can we do?" ಸ್ವಲ್ಪ ಫೋರ್ಸ್ ಮಾಡಿದರೆ ಪೊಲೀಸ್‌ಗೆ ದೂರು ಕೊಡುತ್ತಾರೆ. This is the fate of a legislator. ಪಬ್ಲಿಕ್ ಮುಂದೆ ಹೋಗಿ ನಾನು ಮಾತನಾಡಬೇಕಾದರೆ, ಸರ್, ಸಾವಿರಾರು ಜನರು ಇಲ್ಲಿ ಸಾಯುತ್ತಿದ್ದಾರೆ ನೀವು ಎಲ್ಲಿ ಇದ್ದೀರಿ ಎಂದು ಕೇಳುತ್ತಾರೆ. I am not a doctor. I am not a compounder.

ನಾನು ಹೋಗಿ ಅವನಿಗೆ ಇಂಜೆಕ್ಷನ್ ಮಾಡುವುದಕ್ಕಾಗುವುದಿಲ್ಲ, ಮುಟ್ಟುವುದಕ್ಕಾಗುವುದಿಲ್ಲ. ಈಗ ನಮ್ಮ ಫ್ರೆಂಡ್ ಹೇಳಿದರು, ಶಾಸಕರಿಗೆ ಬರಬೇಕು ಎಂದು, ಫಸ್ಟ್ ಸ್ಪೀಕರ್‌ಗೆ ಬರಬೇಕು. ಆಮೇಲೆ ಸಿಎಂ, ಡೆಪ್ಯೂಟಿ ಸಿಎಂಗೆ ಬಂದ ನಂತರ, attention will be drawn. Disease is same, whether he is rich or poor.... ಬಡವರಿಗೂ ಮತ್ತು ಸಾಹುಕಾರ್‌ಗಳಿಗೂ ಚಿಕನ್ ಗುನ್ಯಾನೇ ಬರುವುದು. ಶ್ರೀಮಂತರಿಗೆ ಚಿಕನ್‌ಗುನ್ಯಾ ಬಿಟ್ಟು ಪಿಶಾಚಿ ಗುನ್ಯಾ ಬಂದು ಬಿಡುತ್ತದೆ ಏನು? ಇಲ್ಲ, disease is same, but the place is different. ಅವನು ಗೋಲ್ಡನ್ ಕಾಟ್‌ದಲ್ಲಿ ಮಲಗಿದ್ದಾನೆ, ಇವನು ಬೀದಿಯಲ್ಲಿ ಮಲಗಿರುತ್ತಾನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ತಮಗೆ ಬಂದು ಬಿಟ್ಟಿತು ಎಂದು ತಿಳಿದುಕೊಳ್ಳಿ ಅಥವಾ ಮುಖ್ಯಮಂತ್ರಿಗಳಿಗೆ ಬಂದರೆ, ಸಭೆಯ ಗತಿ ಏನು? ಶಾಸಕರಿಗೆ ಬಂದು ಬಿಟ್ಟರೆ ಇಡೀ ಸಭೆ ಚಿಕನ್ ಗುನ್ಯಾ ಆಗಿ ಹೋಗಿ ಸಭೆ ಮುಂದಕ್ಕೆ ಹಾಕಬೇಕಾದೀತು, ಅದರ ಸಲುವಾಗಿ ಸ್ವಲ್ಪ ಎಚ್ಚರಿಕೆಯನ್ನು ವಹಿಸಿ. ಮಾನ್ಯ ಉಪ ಮುಖ್ಯಮಂತ್ರಿಗಳೇ ಇದು ಬಹಳ ಅಪಾಯವಿದೆ. ಇದು ಇನ್ನೂ ನಮಗೆ ತಲುಪಿಲ್ಲ, ಈ ಸದನದೊಳಗಡೆ ತಲುಪಿಲ್ಲ, ನಾಳೆ ನಾಡಿದ್ದು ಬರಬಹುದು.

(ಗೊಂದಲ)

ಶ್ರೀ ಎನ್. ರಾಜೇಂದ್ರನ್ : ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. There is no fear in the minds of Doctors. They do not care. They are not giving attention.

ತಾವು ಉತ್ತರವನ್ನು ಕೊಡುವ ಟೈಮ್‌ನಲ್ಲಿ you should say that the Medical Officers at the district level shoud attend to this and give attention to the poor people. ಯಾವ್ಯಾವ ರೀತಿಯ ಡಿಸೀಜ್ ಬಂದಿದೆ, ಏನೇನು ಅಟೇನ್‌ಷನ್ ಕೊಡಬೇಕು. ಮೆಡಿಸಿನ್ಸ್‌ಗಳೂ ಹೇಗೆ ಇರಬೇಕು. ಇವೆಲ್ಲಾ ನಿಮ್ಮ ಮಾತಿನಲ್ಲಿದೆ. ತಾವು ಒಂದು ಸ್ಟ್ರಾಂಗ್ ಆಗಿ instruct the administration. Let them take care. For having given this opportunity, I thank the Chair.

ಶ್ರೀಮತಿ ಭಾಗೀರತಿ ಮರಳಸಿದ್ದನಗೌಡ (ಕೊಟ್ಟೂರು) : ಮಾನ್ಯ ಅಧ್ಯಕ್ಷರೆ, ಹಿಂದಿನ ಸದನದಲ್ಲಿ ಈ ಚಿಕೂನ್‌ಗುನ್ಯಾ ವಿಚಾರವನ್ನು ಪ್ರಸ್ತಾಪ ಮಾಡಿದ ಒಂದು ವಾರದಲ್ಲಿಯೇ ಬಹುಶಃ ನನ್ನ ಕ್ಷೇತ್ರದಲ್ಲಿ ಪ್ರಪ್ರಥಮವಾಗಿ ಇಡೀ ಜಿಲ್ಲೆಯಲ್ಲಿ ಈ ಕಾಯಿಲೆ ಹೇಗೆ ಬಂತು ಎನ್ನುವುದರ ಬಗ್ಗೆ ನಾವು ವಿಚಾರವನ್ನು ಮಾಡಿದಾಗ ಬಹುಶಃ ಕೆಲವು ರೈತರು ಬೇರೆ ಭಾಗದಿಂದ ಮೇವನ್ನು ತೆಗೆದುಕೊಂಡು ಬಂದಂಥ ಸಂದರ್ಭದಲ್ಲಿ ಅದರೊಳಗೆ ಬಂದಿರತಕ್ಕಂಥ ಸೊಳ್ಳೆಗಳ ಮುಖಾಂತರ ಹರಡಿತು ಎನ್ನತಕ್ಕಂಥ ವಿಚಾರ ನನ್ನ ಗಮನಕ್ಕೆ ಬಂತು. ಇದು ಯಥೇಚ್ಛವಾಗಿ ಬಹಳ ಜನರಿಗೆ ಹರಡಿ ಬಂದಿರುತ್ತದೆ. ಆ ಗ್ರಾಮದಲ್ಲಿ ವಿಶೇಷವಾದ ಒಂದು ಕೇಂದ್ರವನ್ನು ತೆರೆದು ಬೇರೆ ಭಾಗದಲ್ಲಿರತಕ್ಕಂಥ ಡಾಕ್ಟರ್ಸ್‌ಗಳನ್ನು, ಎಎನ್‌ಎಂ ಗಳನ್ನು ಕರೆಸಿ ನಾವು ಟ್ರೀಟ್‌ಮೆಂಟ್ ಕೊಡಿಸುವ ಹೊತ್ತಿಗೆ ಬಹುಶಃ 100 ಜನರಿಗೆ ಟ್ರೀಟ್‌ಮೆಂಟ್ ಕೊಡಿಸುವ ಹೊತ್ತಿನಲ್ಲಿ ನಮ್ಮ ದುರಾದೃಷ್ಟ ಈ ಕಾಯಿಲೆ ನಮ್ಮ ಡಾಕ್ಟರ್ ಹಾಗೂ ಎಎನ್‌ಎಂ ಗಳಿಗೆ ಬಂತು. ಅವರಿಗೇ ಬಂದ ಮೇಲೆ ನಮಗೆ ಚಿಕಿತ್ಸೆಯನ್ನು ಕೊಡಿಸಲು ಸಾಧ್ಯವಾಗದೇ ಇಡೀ ಕ್ಷೇತ್ರಕ್ಕೆ ಇವತ್ತು ಕಾಯಿಲೆ ಹರಡಿದೆ. ಬಹುಶಃ ನಾನು ಹೇಳುವುದು, ಇದರ ಬಗ್ಗೆ ನಮಗೆ ಸರಿಯಾದ ಮಾಹಿತಿಯೂ ಸಿಗುತ್ತಿಲ್ಲ. ಅದರ ಲಕ್ಷಣಗಳು ಏನು? ಈಗ ಏನಾಗಿದೆ ಎಂದರೆ, ಬೇರೆ ಕಾಯಿಲೆ ಎಂದು ಹೋದಾಗ ಇದು ಚಿಕೂನ್ ಗುನ್ಯಾ

ಎಂದು ಅಂದು ಕೊಳ್ಳುವಂತದ್ದು ಬಂದು ಬಿಟ್ಟಿದೆ. ಇಂತಹ ಸಂದರ್ಭಗಳು ಬಂದಿರುವುದರಿಂದ ನಿನ್ನೆ ತಾನೆ ನಾನು ಕೆಲವು ಗ್ರಾಮಗಳಿಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಮಾತ್ರೆಗಳನ್ನು ಯಾವ ರೀತಿಯಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆಂದರೆ, ಇವತ್ತು ನೀವು ಇದೇ ಊರಿನವರು ಇರುವುದರಿಂದ ಎರಡು ಮಾತ್ರೆಗಳನ್ನು ತೆಗೆದುಕೊಂಡು ಹೋಗಿ, ಪಕ್ಕದ ಹಳ್ಳಿಯವರಿಗೆ ದಿನಾಲೂ ಬಂದು ಹೋಗುವುದಕ್ಕಾಗುವುದಿಲ್ಲ. ಅವರಿಗೆ ನಾಲ್ಕು ಮಾತ್ರೆಗಳನ್ನು ಕೊಡುತ್ತೇವೆ ಎನ್ನತಕ್ಕಂಥ ವಿಚಾರ ಇವತ್ತು ನಮ್ಮಲ್ಲಿದೆ. ಹೀಗಾಗಿ ಮೆಡಿಸಿನ್ಸ್ ಕೊರತೆ ನಮ್ಮಲ್ಲಿ ಬಹಳ ಇದೆ. ವೈದ್ಯರ ಕೊರತೆ ಮತ್ತು ಸಿಬ್ಬಂದಿ ಕೊರತೆಯ ಬಗ್ಗೆ ನಾವು ಹೇಳುವ ಹಾಗೆ ಇಲ್ಲ. ಪ್ರತಿ ಸದನದಲ್ಲಿ ಮಾತನಾಡುತ್ತೇವೆ, ಪ್ರಶ್ನೆಗಳನ್ನು ಹಾಕುತ್ತಲೆ ಇರುತ್ತೇವೆ. ಇದು ಮುಗಿಯದ ಕಥೆ. ಇದಕ್ಕಾಗಿ ಯಾವುದಾದರೊಂದು ವಿಶೇಷ ರೀತಿಯಲ್ಲಿ ಈ ರಾಜ್ಯವನ್ನು ಮತ್ತು ನನ್ನ ಕ್ಷೇತ್ರಕ್ಕೆ ಹೆಚ್ಚಿನ ರೀತಿಯಲ್ಲಿ ಮೆಡಿಸಿನ್ಸ್‌ಗಳನ್ನು ಒದಗಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸರ್ ಇವತ್ತು ಈ ಚಿಕೂನ್ ಗುನ್ಯಾ ವ್ಯಾಪಕವಾಗಿ ರಾಜ್ಯದ ಎಲ್ಲಾ ಕಡೆ ಹರಡುತ್ತಾ ಒಂದು ರೀತಿಯ ಸಾಂಕ್ರಾಮಿಕ ರೋಗದ ರೀತಿಯಲ್ಲಿ ಹರಡತಕ್ಕಂಥದ್ದು ಇದರಿಂದ ಭಯಭೀತರಾಗಿದ್ದು ಈ ಮನೆಯ ಎಲ್ಲಾ ಸದಸ್ಯರು ಪಕ್ಷಬೇಧ ಮರೆತು ಒಕ್ಕೊರಲಿನಿಂದ ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತೀರಿ. ಇದಕ್ಕೆ ನಮ್ಮ ಸಂಪೂರ್ಣ ಸಹಮತ ಇದೆ. ಒಂದು ಸರ್ಕಾರವಿದ್ದು ಕಾನೂನು ಸುವ್ಯವಸ್ಥೆ ಹದಗೆಡದಂತೆ ನೋಡಿಕೊಳ್ಳುವುದು ಎಷ್ಟು ಜವಾಬ್ದಾರಿನೋ ಈ ನಾಡಿನ ಜನರ ಆರೋಗ್ಯದ ಕಡೆಗೂ ವಿಶೇಷ ಗಮನವನ್ನು ಕೊಡಬೇಕು. ಇಂತಹ ವಿಶೇಷವಾದಂಥ ರೋಗ ಬಂದಾಗ ಸರ್ಕಾರ ವಾರ್‌ಫೂಟ್‌ನಲ್ಲಿ ಕೆಲಸ ಮಾಡಬೇಕು ಅದು ನಮ್ಮ ಆದ್ಯ ಕರ್ತವ್ಯ ಎನ್ನುವ ಅರಿವು ನಮಗಿದೆ. ಈಗಾಗಲೇ ಈ ಒಂದು ಕಾಯಿಲೆಯನ್ನು ತಡೆಯುವುದಕ್ಕೋಸ್ಕರ ಯಾವ ರೀತಿಯ ಮುಂಜಾಗ್ರತೆಯನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ನಾವು ಕಾರ್ಯೋನ್ಮುಖರಾಗಿದ್ದೇವೆ. ಟ್ಯಾಂಕ್‌ಗಳಲ್ಲಿ ಇರುವ ನೀರನ್ನು ತೆಗೆದು ಶುದ್ಧವಾಗಿ ಇಡುವ ಕೆಲಸ ಅನೇಕ ಕಡೆಗಳಲ್ಲಿ ಆಗಿಲ್ಲ. ನಾವು ಅದನ್ನು ಪ್ರಯೋಗ ಮಾಡಿ ಈ ಶುದ್ಧವಾದ ನೀರನ್ನು ಕುಡಿಯಬೇಕು, ಈ ನೀರಿನಿಂದ ಸ್ವಚ್ಛತೆ ಇಲ್ಲದಿರುವುದರಿಂದ ಈ ಸೊಳ್ಳೆಗಳ ಕಾಟದಿಂದ ಇದು ವಿಶೇಷವಾಗಿ ಈ ರೀತಿಯ ಒಂದು ಪರಿಸ್ಥಿತಿ ಬಂದಿದೆ ಎನ್ನುವುದನ್ನು ತಿಳಿಸುವಂಥ ಒಂದು ಪ್ರಯತ್ನ ಅಂದರೆ ಅಲ್ಲಲ್ಲಿ ಜಾಗ್ರತೆ ಕೊಡಿಸುವುದು ಕರಪತ್ರಗಳನ್ನು ಹಂಚುವುದನ್ನು ನಾವು ಮಾಡಿದ್ದೇವೆ. ಆದರೆ ಒಂದು ಮಾತನ್ನು ನಾನು ಈ ಮನೆಯಲ್ಲಿ ಹೇಳುವಂಥದ್ದು, ಇಲ್ಲಿ ಹಣಕಾಸಿನ ಪ್ರಶ್ನೆ ಬರುವುದಿಲ್ಲ. ಎಷ್ಟೇ ಹಣ ಬೇಕಾದರೂ ಸರ್ಕಾರ ಬಿಡುಗಡೆ ಮಾಡುವುದಕ್ಕೆ ಸಿದ್ಧವಿದೆ, ನಮ್ಮ ರಾಜ್ಯದಲ್ಲಿ ಹರಡಿರತಕ್ಕ ಈ ಒಂದು ರೋಗದಿಂದ ಜನರ ಆರೋಗ್ಯವನ್ನು ಹಾಳಾಗುವುದು ತಡೆದು ಅವರನ್ನು ಆರೋಗ್ಯವಂತರನ್ನಾಗಿ ಮಾಡಬೇಕು. ಈಗಾಗಲೇ ಅನೇಕ ಸದಸ್ಯರು ಹೇಳಿದಂತೆ ರೈತ

ಈವತ್ತು ಹಗಲು-ರಾತ್ರಿಯಲ್ಲಿ ಹೊಲಗದ್ದೆಗಳಲ್ಲಿ ಕೆಲಸವನ್ನು ಮಾಡುವಂಥ ಕಾಲ. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಈ ರೀತಿ ದುಡಿಯುವಂಥ ಕೃಷಿ ಕಾರ್ಮಿಕ ಈ ರೋಗಕ್ಕೆ ತುತ್ತಾಗಿ 25-30 ದಿವಸ ಮಲಗಿಕೊಂಡರೆ ಅವನ ಜೀವನ ಹಾಳಾಗಿ ಹೋಗುತ್ತದೆ. ಅವನ ಕುಟುಂಬದ ಪರಿಸ್ಥಿತಿಯೇ ಬುಡಮೇಲಾಗುತ್ತದೆ ಎನ್ನುವ ಅರಿವು ನಮಗೆ ಇದೆ. ಅದಕ್ಕಾಗಿ ಈ ಮನೆಯಲ್ಲಿ ನಾನು ಭರವಸೆಯನ್ನು ಕೊಡುತ್ತೇನೆ. ಇವತ್ತೇ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ ಮತ್ತೆ ಇದರ ಮೇಲೆ ಏನು ತೀವ್ರತರವಾದ ಕ್ರಮವನ್ನು ತೆಗೆದುಕೊಳ್ಳಬೇಕು, ಅದನ್ನು ತೆಗೆದುಕೊಳ್ಳುತ್ತೇವೆ. ಮೆಡಿಸಿನ್ಸ್ ಇಲ್ಲದೆ ಇರುವ ಬಗ್ಗೆ ಯಾವುದೇ ಶಾಸಕರು ನಮ್ಮ ಒಂದು ಪಿಎಚ್‌ಸಿ ಗಳಲ್ಲಿ ಜಿಲ್ಲಾ ಆಸ್ಪತ್ರೆಗಳಲ್ಲಿ ಈ ತರಹ ಕೊರತೆ ಇದೆ ಎನ್ನುವ ಬಗ್ಗೆ ಯಾರಾದರೂ ನಮ್ಮ ಗಮನಕ್ಕೆ ತಂದರೆ ತಕ್ಷಣವೇ ನಾವು ಕ್ರಮ ಕೈಗೊಳ್ಳುತ್ತೇವೆ. ಮೊದಲು ಸಂಬಂಧಪಟ್ಟಂಥ ಆರೋಗ್ಯ ಇಲಾಖೆಯ ಅಧಿಕಾರಿಗಳ ಜೊತೆ, ನಾನು ಹಾಗೂ ಆರೋಗ್ಯ ಸಚಿವರು ಇವತ್ತೇ ಕುಳಿತುಕೊಂಡು ಮಾತನಾಡುತ್ತೇವೆ. ಎಲ್ಲೆಲ್ಲಿ ಕೊರತೆ ಇದೆ ಅಲ್ಲಿ ಮೆಡಿಸಿನ್ಸ್ ಕೊಡಿಸುವಂಥದ್ದು ಅಥವಾ ಫಾಗಿಂಗ್ ಮೆಷಿನ್ ತರುವ ಬಗ್ಗೆ ವ್ಯವಸ್ಥೆ ಮಾಡುವುದು, ರೆಡಿ ಇಲ್ಲದಿದ್ದರೂ ಎಲ್ಲೆಲ್ಲಿಂದ ತರುವುದಕ್ಕೆ ಸಾಧ್ಯವಿದೆ ಅಲ್ಲಿಂದ ತರಿಸುವ ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಮೆಡಿಸಿನ್ಸ್‌ಗಳ ಅಭಾವ ಇಲ್ಲ. ಇದು ದಿನೇ ದಿನೇ ಹರಡುತ್ತಿರುವಂಥದ್ದು ನಿಜ. ಕಂಟ್ರೋಲ್ ಮಾಡುವುದಕ್ಕಾಗದಂತಹ ಪರಿಸ್ಥಿತಿಯಾಗುತ್ತಿದೆ. ಜ್ವರ ಬರುತ್ತದೆ ಅದು 3-4 ದಿವಸದಲ್ಲಿ ನಿಲ್ಲುತ್ತದೆ, ಮೈ ಕೈ ನೋವು ಪ್ರಾರಂಭವಾಗಿ ಜಾಯಿಂಟ್ ಪೇನ್ ಶುರುವಾಗುತ್ತದೆ. ಜನ ಮನೆಯಲ್ಲಿ ಮಲಗುತ್ತಿರುವುದು ಎಲ್ಲಾ ಕಡೆ ಸತ್ಯ ಸಂಗತಿ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ನಡೆಸಿದೆ. ಇನ್ನೂ ಹೆಚ್ಚು ಕ್ರಮ ತೆಗೆದುಕೊಳ್ಳಬೇಕು, ಮೆಡಿಸನ್ ಇನ್ನು ಎಷ್ಟು ತರಿಸಬೇಕು ಫಾಗಿಂಗ್ ಮೆಷನ್ ತರಬೇಕು ಇದರ ಬಗ್ಗೆ ಒಂದು ವ್ಯವಸ್ಥೆಯಾಗಬೇಕು. ಅಗತ್ಯ ಬಂದರೆ ಖಾಸಗಿ ವೈದ್ಯರನ್ನು ಇದರಲ್ಲಿ ಉಪಯೋಗ ಮಾಡಿಕೊಂಡು, ಇದೆಲ್ಲಕ್ಕೂ ಸರ್ಕಾರ ಸಿದ್ಧವಿದೆ. ಇವತ್ತೇ ಆರೋಗ್ಯ ಸಚಿವರು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ನಾನು ಮಾತನಾಡಿ ಹಣದ ಅಗತ್ಯ ಎಲ್ಲಿ ಇದೆ ಅಲ್ಲಿ ಹಣವನ್ನು ಬಿಡುಗಡೆ ಮಾಡಿ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಶಕ್ತಿಮೀರಿ ಪ್ರಾಮಾಣಿಕ ರೀತಿಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆ. ಇದೂ ಅಲ್ಲದೆ ನಿಮ್ಮ ಯಾವುದೇ ಸಲಹೆ ಇದ್ದರೂ, ಉದಾಹರಣೆಗೆ ಇಲ್ಲಿ ನಮ್ಮ ಸದಸ್ಯರು ಮಾತನಾಡುವಂಥ ಕಾಲದಲ್ಲಿ ಹೋಮಿಯೋಪಥಿ ಮೆಡಿಸಿನ್ಸ್‌ನಿಂದ ಉಪಯೋಗವಾಗುವುದರ ಬಗ್ಗೆ ಕೂಡ ಪ್ರಯತ್ನವನ್ನು ನಡೆಸಿದ್ದೇವೆ. ಇನ್ನೂ ಬೇರೆ ರೀತಿಯಲ್ಲಿ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಏನೇನು ಸಾಧ್ಯವಿದೆಯೋ ಶಕ್ತಿಮೀರಿ ಪ್ರಾಮಾಣಿಕ ಪ್ರಯತ್ನ ಮಾಡಿ ಇದನ್ನು ಕಂಟ್ರೋಲ್‌ಗೆ ತರುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಮತ್ತೆ ನಾವು ಏನು ಮಾಡಿದ್ದೇವೆ ಎನ್ನುವುದರ ಬಗ್ಗೆ ನಾಳೆ ಅಥವಾ ನಾಡಿದ್ದು ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ನಮ್ಮ ಆರೋಗ್ಯ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ನೀವು ಹೇಳುವ ಪ್ರಕಾರ ನಿಮ್ಮ ಹೆಲ್ತ್ ಮಿನಿಷ್ಟರ್ ಇವತ್ತಿನ ತನಕ ನಿಮಗೆ ಯಾವ ಪ್ರಪೋಜಲ್‌ನ್ನು ಕೊಟ್ಟಿಲ್ಲವೆಂದಾಯಿತಲ್ಲಾ? ಯಾರು ಮಾತನಾಡಿದ್ದಾರೆ ಅವರಿಗೆ ಹೇಳಿದಿರಿ ಇವತ್ತು ನಾನು ಮಾತನಾಡಿಲ್ಲ ಆ ಕಡೆ ಇಲ್ಲವೆಂದಾಯಿತಲ್ಲಾ? ಇವತ್ತಿನವರೆಗೆ ಯಾವ ಪ್ರಪೋಜಲ್ ಇಲ್ಲ.

(ಗೊಂದಲ)

ಅಧ್ಯಕ್ಷರು : ದೇಶಪಾಂಡೆಯವರೇ, ಅವರು ಉತ್ತರವನ್ನು ಹೇಳಲಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ ಎಂಬುದನ್ನು ಅವರು ಹೇಳಲಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಇಲ್ಲಿ ರಾಜಕೀಯವನ್ನು ಯಾರೂ ಮಾಡಬೇಡಿ. ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ, ಸರ್ಕಾರದ ಕರ್ತವ್ಯ.

(ಗೊಂದಲ)

ದೇಶಪಾಂಡೆಯವರೇ, ಅವರು ಮೊದಲು ಉತ್ತರವನ್ನು ಕೊಡಲಿ.

(ಗೊಂದಲ)

ಎರಡು ದಿವಸದಲ್ಲಿ ಉತ್ತರ ಕೊಡಿಸುತ್ತಾರೆ. ಅವರು ಮೊದಲು ಉತ್ತರವನ್ನು ಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾಳೆ ಎಲ್ಲಾ ವಿವರದೊಂದಿಗೆ ಇಲ್ಲಿ ನಮ್ಮ ಹೆಲ್ತ್ ಮಿನಿಸ್ಟರ್ ಬಂದು ಒಂದು ಸ್ಟೇಟ್‌ಮೆಂಟ್‌ನ್ನು ಮಾಡುತ್ತಾರೆ. ಏನು ಬೇಕಾದರೂ ನಿಮ್ಮ ಪ್ರಶ್ನೆಯನ್ನು ಕೇಳಿ. ಇವತ್ತೇ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ನಮ್ಮ ಹೆಲ್ತ್ ಮಿನಿಸ್ಟರ್‌ರವರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆನ್ನುವ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ನಾನು ಮಾಡಿಸುತ್ತೇನೆ.

(ಗೊಂದಲ)

ಶ್ರೀ ಎ.ಎಸ್. ಬಸವರಾಜು : ಇಲ್ಲಿಯವರೆಗೆ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ ಎಂಬುದನ್ನು ಹೇಳಲಿ, ಇಲ್ಲಿಯವರೆಗೆ ಏನೂ ಹಣವನ್ನು ಬಿಡುಗಡೆ ಮಾಡಿಲ್ಲ.

ಅಧ್ಯಕ್ಷರು : ಮಾನ್ಯ ಉಪ ಮುಖ್ಯಮಂತ್ರಿಗಳೇ, ನೀವು ಅಧಿಕಾರಿಗಳ ಜೊತೆ, ಎಲ್ಲಾ ರಾಜಕೀಯ ಪಕ್ಷದ ಮುಖಂಡರುಗಳು ನೀವು ಹಿರಿಯ ಅಧಿಕಾರಿಗಳನ್ನು ಕರೆದು ಮಾತನಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗ ಸದನ ಮುಗಿದ ತಕ್ಷಣ ಸಾಯಂಕಾಲ ಪ್ರತಿಪಕ್ಷದ ಎಲ್ಲಾ ನಾಯಕರುಗಳನ್ನು ಕರೆಸುತ್ತೇನೆ.

ಶ್ರೀ ಮಹದೇವ : ಇದು ಏನೂ ರಾಜಕೀಯ ಸಮಸ್ಯೆ ಅಲ್ಲ, ಪ್ರತಿಪಕ್ಷದ ನಾಯಕರನ್ನು ಕರೆದು ಮಾತನಾಡುವುದಕ್ಕೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮಂತ್ರಿಯಾಗಿ ಕೆಲಸ ಮಾಡಿದವರುಗಳು, ಸುಮ್ಮನೆ ಕುಳಿತುಕೊಳ್ಳಿ. ನನಗೆ ಮಾತನಾಡುವುದಕ್ಕೆ ಬಿಡದೆ ನೀವೇ ಎದ್ದುನಿಂತುಕೊಂಡು ಮಾತನಾಡಿದರೆ ಸರ್ಕಾರ ಏನೂ ಮಾಡಿಲ್ಲವೆಂದು ನೀವು ಹೇಳುತ್ತೀರಾ? ಅಲ್ಲಾ ಸರ್, ನಾನು ಇನ್ನು ಏನು ಹೇಳಬೇಕು. ನಾಳೆ ಪ್ರತಿಪಕ್ಷದ ನಾಯಕರ ಸಭೆಯನ್ನು ಕರೆಯುತ್ತೇನೆ. ನಿಮ್ಮ ಸಲಹೆ ಕೊಡಿ, ನಾಳೆ ಆರೋಗ್ಯ ಸಚಿವರಿಂದ ಸ್ಟೇಟ್‌ಮೆಂಟ್ ಮಾಡಿಸುತ್ತೇನೆ. ನೀವು ಏನು ಸಲಹೆಯನ್ನು ಕೊಡುತ್ತೀರಿ ಅದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತದೆ. ಇದಕ್ಕಿಂತ ನಾನು ಏನು ಉತ್ತರವನ್ನು ಕೊಡಬಹುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಹಣದ ಏನೂ ಕೊರತೆ ಇಲ್ಲವೆಂದು ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ರಾಯರೆಡ್ಡಿಯವರೆ, ಮಾನ್ಯ ಸಿದ್ದರಾಮಯ್ಯನವರೆ, ತಾವು ಹೇಳುವ ಮಾತನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಹೇಳುವ ಮಾತನ್ನು ತಾವು ಕೇಳಬೇಕು.

ಅಧ್ಯಕ್ಷರು : ಮಾನ್ಯ ಉಪ ಮುಖ್ಯಮಂತ್ರಿಗಳು ನಿಮ್ಮನ್ನೆಲ್ಲಾ ಮೊದಲು ಕರೆಯಲಿ. ಅವರು ಎಲ್ಲರನ್ನೂ ಕರೆದು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈಗ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದರೆ, ಬಹಳ ಕಷ್ಟವಾಗುತ್ತದೆ. ಈಗ ರೋಗವು ಬಹಳ ಮಿತಿ ಮೀರಿ ಹೋಗಿದೆ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, ತಾವು ಹೇಳಿದ ಮೇಲೆ ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ : ಇರಲಿ, ತಾವು ಇನ್ನೂ ಸ್ವಲ್ಪ ತಾಳ್ಮೆಯಿಂದ ಇರಬೇಕು. ಸರ್ಕಾರದ ಪರವಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂತಹ ಉತ್ತರವನ್ನು ಆಲಿಸಿದರೆ ಇಲ್ಲಿಯವರೆವಿಗೂ ಸರ್ಕಾರ ಏನೂ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ನಾನು ಆ ಮಾತನ್ನು ಹೇಳಿದ್ದೇನಾ?

ಶ್ರೀ ಸಿದ್ದರಾಮಯ್ಯ : ನಾವು ಹೇಳುವುದನ್ನು ಕೇಳಿ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದ ಮೇಲೆ ಗೂಬೆ ಕೂರಿಸುವುದಕ್ಕೆ ಈ ರೀತಿ ಮಾತನಾಡಿದರೆ ಹೇಗೆ? ತಾವು ಸ್ವಲ್ಪ ಜವಾಬ್ದಾರಿಯುತವಾಗಿ ಮಾತನಾಡಬೇಕಾಗುತ್ತದೆ. ಅವರು ಈ ಹಿಂದೆ ಒಬ್ಬರು ಪ್ರಮುಖರಾಗಿದ್ದಂತಹವರು, ಈ ಸ್ಥಾನದಲ್ಲಿ ಕುಳಿತುಕೊಂಡು ಕೆಲಸ ಮಾಡಿದವರು ಆಗಿದ್ದಾರೆ. ಸರ್ಕಾರ ಏನೂ ಕ್ರಮವನ್ನು ತೆಗೆದುಕೊಂಡಿಲ್ಲವೆಂದರೆ ಏನರ್ಥ?

ಒಬ್ಬ ಮಾನ್ಯ ಸದಸ್ಯರು : ಕ್ರಮವನ್ನು ಕೈಗೊಂಡಿದ್ದರೆ ಈ ಗತಿ ಏತಕ್ಕೆ ಆಗುತ್ತಿತ್ತು?

(ಗೊಂದಲ)

ಶ್ರೀ ಸಿದ್ದರಾಮಯ್ಯ : ರಾಜ್ಯದ ಜನತೆಗೆ ಬಹಳ ಗೊತ್ತಾಗಿದೆ. ನಿಮ್ಮದೂ ಗೊತ್ತಾಗಿದೆ ರಾಜ್ಯದ ಜನತೆಗೆ. ರಾಜ್ಯದ ಜನತೆಗೆ ಗೊತ್ತಿಲ್ಲದೆ ಇರುವುದು ಏನಿಲ್ಲಿ? ನೀವು ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಏನೇನು ಮಾತನಾಡಿದ್ದೀರಿ ಎಂಬುದು ನಮಗೂ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾತನಾಡುತ್ತಿರುವವರೆಲ್ಲರೂ ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದಾರೆ. ಇಲ್ಲಿ ಯಾರೂ ಕೂಡ ಬೇಜವಾಬ್ದಾರಿಯಿಂದ ಮಾತನಾಡುತ್ತಿಲ್ಲ, ಅವರು ಬೇಜವಾಬ್ದಾರಿಯಿಂದ ಮಾತನಾಡುತ್ತಾರೆಂದರೆ ಅರ್ಥವೇನು? ನಾವು ಜವಾಬ್ದಾರಿಯಿಂದ ಮಾತನಾಡುತ್ತಿಲ್ಲವೇ? ಮಾನ್ಯ ಸಿದ್ದರಾಮಯ್ಯನವರೆ ಒಂದು ನಿಮಿಷ ನಾನು ಮಾತನಾಡುತ್ತೇನೆ. ಬನ್ನಿ ಈಗಲೇ ಹೋಗೋಣ, ಮಾನ್ಯ ಅಧ್ಯಕ್ಷರೆ, ತಾವು ಒಂದು ಸಮಿತಿಯನ್ನು ಮಾಡಿ ಇಲ್ಲಿಂದ ಎರಡು ಗಂಟೆಯೊಳಗೆ ಪ್ರೈಮರಿ ಹೆಲ್ತ್ ಸೆಂಟರ್‌ಗೆ ಹೋಗೋಣ. ಅಲ್ಲಿ ಅವರು ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ. ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆಂದರೆ ಏನರ್ಥ ನಮಗೆ ಬೇರೆ ಕಸುಬಿಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಜವಾಬ್ದಾರಿ ಗೊತ್ತಿದೆ, ನಮಗೆ ಸರ್ಕಾರ ನಡೆಸುವುದು ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಿಮ್ಮ ಜವಾಬ್ದಾರಿಯನ್ನು ನೀವು ಮಾಡಿ.

(ಗೊಂದಲ)

ಅಧ್ಯಕ್ಷರು : ಏನು ಮಾಡುವುದಕ್ಕಾಗುತ್ತದೆ? ಎಲ್ಲರೂ ಕೂಡ ಜವಾಬ್ದಾರಿಯಿಂದ ಮಾತನಾಡಬೇಕು. ಇಲ್ಲದೆಹೋದರೆ ಏನಾದರೂ ಒಂದು ತೀರ್ಮಾನಕ್ಕೆ ಬರಬೇಕು.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಆರೋಗ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ ಎಂದಿದ್ದಾರೆ. ಇದನ್ನು ನಾಳೆಗೆ ಇಡಿ. ಆರೋಗ್ಯ ಸಚಿವರು ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ನಾಳೇ ದಿವಸ ಲಿಖಿತವಾದ ಉತ್ತರವನ್ನು ಸಬ್‌ಮಿಟ್ ಮಾಡುತ್ತಾರೆ. ಆಮೇಲೆ ಮತ್ತೇನಾದರು ಸ್ಪೆಸಿಫಿಕ್ಕಾಗಿ ಇದ್ದರೆ ಅದನ್ನು ಕೇಳಲಿ.

ಅಧ್ಯಕ್ಷರು : ಆಯಿತು. ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೆ ಅದನ್ನು ಕೇಳೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಸಿದ್ದರಾಮಯ್ಯ : ನಾನು ಇನ್ನೂ ಮುಗಿಸಿಲ್ಲ.

ಅಧ್ಯಕ್ಷರು : ನೀವು ಇನ್ನೂ ಮುಗಿಸಿಲ್ಲವೇ?

ಶ್ರೀ ಸಿದ್ದರಾಮಯ್ಯ : ನಾನು ನನ್ನ ಮಾತನ್ನು ಇನ್ನೂ ಮುಗಿಸಿಲ್ಲ.

ಅಧ್ಯಕ್ಷರು : ಆಯಿತು ಮಾತನಾಡಿ. ಎಲ್ಲರೂ ಈ ರೀತಿಯಾಗಿ ಮಾತನಾಡಿದರೆ ಹೇಗೆ? ಮಾನ್ಯ ಸಿದ್ದರಾಮಯ್ಯನವರು, ನಾನು ನಿಂತುಕೊಂಡಿದ್ದೇನೆ, ನಾನು ಇನ್ನೂ ನನ್ನ ಮಾತನ್ನು ಮುಗಿಸಿಲ್ಲವೆಂದು ಅವರು ಹೇಳುತ್ತಿದ್ದಾರೆ. ಇವರು ನಿಂತುಕೊಳ್ಳುತ್ತಾರೆ, ಅವರು ನಿಂತುಕೊಳ್ಳುತ್ತಾರೆ. ನಾವು ಏನು ಮಾಡುವುದು? ಮಾನ್ಯ ಸಿದ್ದರಾಮಯ್ಯನವರು ಇನ್ನೂ ಯೀಲ್ಡ್ ಆಗಿಲ್ಲ.

ಶ್ರೀ ಮಹದೇವ : ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, ಮಾನ್ಯ ಸದಸ್ಯರಾದ ಶ್ರೀ ಮಹದೇವರವರಿಗೆ ಸ್ವಲ್ಪ ಬುದ್ಧಿ ಹೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಿಮ್ಮ ಮೇಲೆ ಗೌರವದಿಂದ ಹಾಗೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ಅದು ಗೌರವ ಅಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಅವರಿಗೆ ಹೋಗೋ, ಬಾರೋ ಅನ್ನುತ್ತೀರಿ, ಅದಕ್ಕೋಸ್ಕರವಾಗಿ ಗೌರವದಿಂದ ಆ ರೀತಿ ಮಾಡುತ್ತಿದ್ದಾರೆ. ಅದು ಇರಲಿ ಬಿಡಿ. ಮಾನ್ಯ ಯಡಿಯೂರಪ್ಪನವರು ಇಂತಹ ಸಮಸ್ಯೆಗಳ ಬಗ್ಗೆ ವಿರೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಆಗ ಅವರು ಇಂತಹ ಸಮಸ್ಯೆಗಳನ್ನು ಎತ್ತಿದಾಗ ಯಾವ ರೀತಿಯಾಗಿ ಮಾತನಾಡುತ್ತಿದ್ದರು. ಆಗ ರೋಷ ಎಷ್ಟಿತ್ತು, ಯಾವ ಆವೇಶ ಇರುತ್ತಿತ್ತು. ಯಾವ ಬಿರುಸಿನ ಮಾತುಗಳು ಇದ್ದವು ಎಂದು ನಾವು ಎಷ್ಟೋ ಸಾರಿ ಇಲ್ಲಿ ಸರ್ಕಾರದಲ್ಲಿ ಕುಳಿತುಕೊಂಡು ಕೇಳಿದ್ದೇವೆ. ನಾವು ಕೂಡ ಸರ್ಕಾರವನ್ನು ನಡೆಸಿದ್ದೇವೆ, ನಮಗೂ ಕೂಡ ಗೊತ್ತಿದೆ. ಆದರೆ ಇಂತಹ ಕಾಯಿಲೆ ಇಷ್ಟೊಂದು ವ್ಯಾಪಕವಾಗಿ ಹಬ್ಬಿಕೊಂಡಿದೆ. ಕಳೆದ ಒಂದೆರಡು ತಿಂಗಳಿನಿಂದ ಈ ರೋಗ ಹರಡುತ್ತಿದೆ. ಈ ರೋಗ ಬಂದು 6 ತಿಂಗಳಾಯಿತೇ? ಜನವರಿಯಿಂದ ಈ ರೋಗ ಹಬ್ಬಿಕೊಂಡು ಬಂದಿದೆ. ಇವತ್ತಿನವರೆವಿಗೆ ಇದನ್ನು ತಡೆಗಟ್ಟುವ ಬಗ್ಗೆ ಮಾನ್ಯ ಯಡಿಯೂರಪ್ಪನವರು ಸರ್ಕಾರದ ಪರವಾಗಿ ಉತ್ತರವನ್ನು ಕೊಡಲಿಲ್ಲ.

ನೀವು ಎಲ್ಲಿಗೆ ಹೋಗಿ ಬೇಕಾದರೂ ಕೇಳಿ. ಯಾವ ಆಸ್ಪತ್ರೆಗಳಲ್ಲೂ ಕೂಡ ಔಷಧಿಗಳು ಇಲ್ಲ. ಸಂಬಂಧಪಟ್ಟಂತಹ ಇಂಜಕ್ಷನ್‌ಗಳು ಇಲ್ಲ. ಸಾಪ್ಟ್ ಇಲ್ಲ. ಡಾಕ್ಟರ್‌ಗಳು ಹಳ್ಳಿಗಳಿಗೆ ಹೋಗುತ್ತಿಲ್ಲ. ಹಿಂದೆ ಮಲೇರಿಯಾ ರೋಗ ಬಂದಾಗ, ಹೋಗಿ ಕೊಳಚೆ ನೀರು ಇರುವುದನ್ನು ನೋಡಿ, ಅಲ್ಲಿರುವ ಸೊಳ್ಳೆಗಳನ್ನು ನಾಶ ಮಾಡಿ ತಕ್ಕಂಥಹದ್ದು, ಇವೆಲ್ಲವನ್ನೂ ಮಾಡುತ್ತಿದ್ದರು. ಈಗ ಯಾವ ಡಾಕ್ಟರ್‌ಗಳು ಒಂದು ಹಳ್ಳಿಗೂ ಹೋಗುತ್ತಿಲ್ಲ. ಪ್ಯಾರಾ ಮೆಡಿಕಲ್ ಫೋರ್ಸ್ ಕೂಡ ಎಲ್ಲೂ ಹೋಗುತ್ತಿಲ್ಲ. ಈ ರೀತಿಯಾಗಿ ಏನಾಗಿದೆ ಇವತ್ತು ವ್ಯಾಪಕವಾಗಿ ಈ ರೋಗ ಹರಡಿದೆ, ಇದರ ಬಗ್ಗೆ ಈವತ್ತಿನವರೆಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ನೋಡಿ ಅವರಿಗೆ ಇವತ್ತಿನವರೆಗೆ ಹಣಕಾಸು ಬೇಕೋ ಬೇಡವೋ ಎಂದು ಹೆಲ್ತ್ ಡಿಪಾರ್ಟ್‌ಮೆಂಟ್‌ನವರು ಪ್ರಪೋಜಲನ್ನು ಕಳುಹಿಸಿರುವುದಿಲ್ಲ. ಇವತ್ತು ಇವರು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುವುದಕ್ಕಾಗುತ್ತಿಲ್ಲ. ಎಷ್ಟು ಹಣವನ್ನು ಇದಕ್ಕಾಗಿ ಬಿಡುಗಡೆ ಮಾಡಿದ್ದೇವೆಂದು ಹೇಳಲಿ. ಇಂತಹ ಕಾರ್ಯಕ್ರಮಗಳಿಗಾಗಿ, ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಇಂತಿಂಥ ಆಸ್ಪತ್ರೆಗಳಿಗೆ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಇಂತಹ ಔಷಧಿಗಳನ್ನು ತೆಗೆದುಕೊಳ್ಳುವುದಕ್ಕಾಗಿ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಲಿ. Where is the statement like that?

ಅವರು ಏನು ಹೇಳುತ್ತಾರೆಂದರೆ ಕರೆದು ಮಾತನಾಡುತ್ತೇವೆಂದು ಹೇಳಿದ್ದಾರೆ. ನೀವೋ, ಅವರು ಲೀಡರ್ ಆಫ್ ದಿ ಅಪೋಜಿಷನ್‌ರವರನ್ನು ಕರೆಯುತ್ತೇವೆಂದು ಹೇಳುತ್ತಾರೆ. ನಮ್ಮನ್ನು ಕರೆಯುವುದನ್ನು ಬಿಟ್ಟುಬಿಡುತ್ತೀರಿ. ನಾವು ಹೋಗಿ ಯಾರಿಗೆ ಹೇಳಬೇಕು? ನಾವು ಇಲ್ಲಿಯೇ ಹೇಳಬೇಕಲ್ಲಾ? ಜನರನ್ನು ನಮ್ಮನ್ನು ಆಯ್ಕೆ ಮಾಡಿ ಇಲ್ಲಿಗೆತಾನೇ ಕಳುಹಿಸಿರುವುದು? ನಾವು ಇಲ್ಲಿ ಹೇಳಬೇಕಾಗಿದೆಯಲ್ಲಾ. ಆದ್ದರಿಂದ ಸರ್ಕಾರ ಇವತ್ತು ಸಂಪೂರ್ಣವಾಗಿ ಈ ಕಾಯಿಲೆಯನ್ನು ತಡೆಗಟ್ಟುವುದರಲ್ಲಿ ವಿಫಲವಾಗಿದೆ. ಅವರು ಏನಾದರೂ ತಿಳಿದುಕೊಳ್ಳಲಿ, ಸರ್ಕಾರ ವಿಫಲವಾಗಿದೆ. ಈಗಲಾದರೂ ಕೂಡ ಕೂಡಲೇ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕು. ಮಾನ್ಯ ಯಡಿಯೂರಪ್ಪನವರು ಮಾತ್ತೆತ್ತಿದ್ದರೆ ಜನರ ಬಳಿಗೆ ಹೋಗೋಣವೆಂದು, ಅಧಿಕಾರದಲ್ಲಿದ್ದಾಗಲೂ ಹಾಗೆಯೇ ಹೇಳುತ್ತಾರೆ. ಇಲ್ಲಿ ವಿರೋಧಪಕ್ಷದಲ್ಲಿದ್ದರೂ ಜನರ ಬಳಿಗೆ ಹೋಗೋಣವೆಂದು ಹೇಳುತ್ತಾರೆ, ನಡೆಯಿರಿ ಈಗಲೇ ಹೋಗೋಣ. ಸರ್ಕಾರವನ್ನು ಡಿಸಾಲ್ವ್ ಮಾಡಿ, ನಡೆಯಿರಿ ಹೋಗೋಣ. ಇವರಿಗೆ ಹೋಗುವುದಕ್ಕೂ ಆಗುವುದಿಲ್ಲ. ಜನರ ಬಳಿಗೆ ಹೋದರೆ ಗೊತ್ತಾಗಿ ಹೋಗುತ್ತದೆ. ಜನರು ಏನು ಹೇಳುತ್ತಿದ್ದಾರೋ ಅದನ್ನೇ ನಾವು ಇಲ್ಲಿ ಹೇಳುತ್ತಿರುವುದು. ಆದ್ದರಿಂದ ದಯಮಾಡಿ ಈ ತರಹ ನಮ್ಮ ಬಾಯಿ ಮುಚ್ಚಿಸುವುದರಿಂದ ಬಿಟ್ಟು ಕೂಡಲೇ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದನ್ನು ಮಾಡಬೇಕು. ಆ ತರಹದ ಕಟ್ಟುನಿಟ್ಟಿನ ಸೂಚನೆಯನ್ನು ತಾವು ದಯಮಾಡಿ ಕೊಡಬೇಕು.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆವು. ಇವತ್ತು ಸದನದ ಎಲ್ಲಾ ಹಿರಿಯ ಸದಸ್ಯರು

ಎಲ್ಲಾ ಗೆಳೆಯ ಶಾಸಕರೂ ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಇದು ಮೊದಲನೆಯ ಸಲವಲ್ಲ, ನಾಲ್ಕನೆ ಸಲ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಎಂದು ಸರ್ಕಾರ ಅಧಿಕಾರಕ್ಕೆ ಬಂತೋ ಅಲ್ಲಿಂದ ಈ ರೋಗ ಪ್ರಾರಂಭವಾಗಿದೆ ಕರ್ನಾಟಕದಲ್ಲಿ.

ಶ್ರೀ ಹೆಚ್.ಡಿ. ಬಸವರಾಜು : ಈ ರೋಗ ಜನವರಿಯಲ್ಲಿ ಬಂದಿರುತ್ತದೆ, ತಿರುಚಬೇಡಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ದಯವಿಟ್ಟು ಮಾನ್ಯ ವಿರೋಧಪಕ್ಷದ ನಾಯಕರು ಈ ಒಂದು ಸದನದಲ್ಲಿ ಅಸತ್ಯವನ್ನು ನುಡಿಯಬಾರದು. ಈ ಸದನದಲ್ಲಿ ಅಸತ್ಯವನ್ನು ನುಡಿಯುವುದಕ್ಕೆ ಹೋಗಬೇಡಿ. ಈ ಕಾಯಿಲೆ ಜನವರಿಯಲ್ಲಿ ಬಂದಿರುತ್ತದೆ. ನಮ್ಮ ಸರ್ಕಾರ ಯಾವಾಗ ಬಂತು ಅಂತ ಬೇಕಾದರೆ ದಾಖಲೆಗಳನ್ನು ತೆಗೆದು ನೋಡಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ನಮ್ಮ ಮೇಲೆ ಹೇಳುವಂತಹ ಕೆಲಸವನ್ನು ಮಾಡಬೇಡಿ. ಇದು ನಿಮ್ಮ ಕೊಡುಗೆ ಸ್ವಾಮಿ. ಇದು ನೀವು ಕೊಟ್ಟಿರುವಂತಹ ಕೊಡುಗೆ. ನೀವು ಅವತ್ತು ಸರಿಯಾಗಿ ಆಸಕ್ತಿ ವಹಿಸಿ ಕೆಲಸ ಮಾಡಿದ್ದರೆ ಸರಿಯಾಗಿ ವೈದ್ಯರನ್ನು ನೇಮಕ ಮಾಡಿದ್ದರೆ, ಸರಿಯಾಗಿ ಔಷಧಿ ವಗೈರೆ ಪೂರೈಸಿದ್ದಾರೆ. ಈ ಕಾಯಿಲೆಯ ವ್ಯಾಪಕವಾಗಿ ಹರಡುತ್ತಿರಲಿಲ್ಲ. ಇದು ವ್ಯಾಪಕವಾಗಿ ಹಬ್ಬುವುದಕ್ಕೆ ನೀವೇ ಕಾರಣರು.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ನೀವು ಸರ್ಕಾರವನ್ನು ಉಳಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ. ರೋಗದ ಬಗ್ಗೆ ನಿಮಗೆ ಚಿಂತನೆ ಇರಲಿಲ್ಲ. ಆ ಒಂದು ಕಾರಣದಿಂದ ಈ ರೋಗ ವ್ಯಾಪಕವಾಗಿ ಹರಡಿದೆಯೇ ಹೊರತು ಬೇರೆ ಏನೂ ಕಾರಣವಿಲ್ಲ.

(ಗೊಂದಲ)

ಅಧ್ಯಕ್ಷರು : ಈ ಸಭೆಗೆ ಗೌರವ ಬರುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೋ ಅದನ್ನು ಕೇಳಬೇಕು.

ಶ್ರೀ ಎನ್. ಧರ್ಮಸಿಂಗ್ : ರೋಗಗಳು ಕರ್ನಾಟಕ ಪ್ರದೇಶದಲ್ಲಿ ಹರಡುತ್ತಿದೆ. ಇಲ್ಲಿಯವರೆಗೆ ನಿಯಂತ್ರಣ ಮಾಡಲೇಬೇಕಾಗಿತ್ತು. ಹಣವನ್ನು ಬಿಡುಗಡೆ ಮಾಡಬೇಕಾಗಿದೆ. ನಾವು ಪ್ರಸ್ತಾಪ ಮಾಡಿದ ಮೇಲೆ ಸಭೆಯನ್ನು ಕರೆಸುತ್ತೇವೆ. ನೋಡುತ್ತೇವೆನ್ನುವಂತಹ ರೀತಿಯಲ್ಲಿ ಹೇಳಿದಾಗ ನಾನು ಅತಿಶಯೋಕ್ತಿ ಮಾಡುತ್ತಿಲ್ಲ. ತಮ್ಮ ಜಿಲ್ಲೆಯಲ್ಲಿ ಬೇರೆ ಜಿಲ್ಲೆಯಲ್ಲಿ ಬೇರೆ ಕಡೆಯಲ್ಲೂ ಕೂಡ ಹಬ್ಬಿರುವ ಬಗ್ಗೆ ಈಗಾಗಲೇ ಇದರ ಬಗ್ಗೆ ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ. ನನ್ನ ಜೊತೆಯಲ್ಲಿ ಬನ್ನಿ. ನನ್ನ ಮತ ಕ್ಷೇತ್ರದಲ್ಲಿ ಎಷ್ಟಾಗಿದೆ ಎಂಬುದನ್ನು ತೋರಿಸುತ್ತೇನೆ. ತಮ್ಮ ಸರ್ಕಾರ ಇದೆ. ಆರೋಗ್ಯದ ದೃಷ್ಟಿಯಿಂದ ಕರ್ನಾಟಕದ ಜನತೆಗೆ ತೊಂದರೆಯಾಗುತ್ತಿದೆ. ಅದಕ್ಕೆ ತಾವು ಸ್ಪಂದಿಸಿಲ್ಲ.

ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ಯಾವ ತರಹದ ಕ್ರಮವನ್ನೂ ಕೈಗೊಂಡಿರುವುದಿಲ್ಲ. ಅಧಿಕಾರಿಗಳು ತಮ್ಮ ಮಾತನ್ನು ಕೇಳುತ್ತಿಲ್ಲ. ಈ ಹಂತದಲ್ಲಿ ಸರ್ಕಾರ ವಿಫಲವಾಗಿದೆ. ಅದಕ್ಕೆ ಕಾಂಗ್ರೆಸ್ ಪಕ್ಷದವರೆಲ್ಲರೂ ತೀರ್ಮಾನವನ್ನೂ ತೆಗೆದುಕೊಂಡಿದ್ದೇವೆ. ಇಂತಹ ಒಂದು ಹೇಳಿಕೆಯಿಂದ ನಮಗೆ ಯಾವುದೂ ತೃಪ್ತಿಯಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ನಾನು ಇನ್ನೂ ಹೇಳಿಕೆಯನ್ನೇ ಕೊಟ್ಟಿಲ್ಲ. ಸಮಗ್ರವಾದ ಹೇಳಿಕೆಯನ್ನು ನಾಳೆ ಮಾಡಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ : ಇದು ಜವಾಬ್ದಾರಿಯುತವಲ್ಲ. ಹೇಳಿಕೆಯನ್ನು ಕೊಡಬೇಕಾಗಿತ್ತು. ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಏನ್ ಸಾರ್ ಈ ರೀತಿ ಮಾತನಾಡಿದರೆ?

ಅಧ್ಯಕ್ಷರು : ಈಗ ಸದನವನ್ನು 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕೆ 1 ಗಂಟೆ 49 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಸದನವು 3 ಗಂಟೆ 27 ನಿಮಿಷಕ್ಕೆ ಸೇರಿತು. ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್. ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠದಲ್ಲಿದ್ದರು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ : ದಿನಗೂಲಿ ನೌಕರರ ಸಮಸ್ಯೆ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೇ, ದಿನಗೂಲಿ ನೌಕರರ ಬಗ್ಗೆ ನಾನು ಮಾನ್ಯ ಅಧ್ಯಕ್ಷರಿಗೆ ಒಂದು ಮನವಿ ಸಲ್ಲಿಸಿದ್ದೆ. ಇಲ್ಲಿ ಮಾನ್ಯ ಹಣಕಾಸು ಸಚಿವರೂ ಉಪ ಮುಖ್ಯಮಂತ್ರಿಗಳೂ ಇದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. 16–4–2006 ರಿಂದ ಹುಬ್ಬಳ್ಳಿಯಲ್ಲಿ ಒಂದು ದೊಡ್ಡ ರ್‍ಯಾಲಿ ಮಾಡಿದರು. ಮತ್ತೆ ಮೇ 1ನೇ ತಾರೀಖು ಹುಬ್ಬಳ್ಳಿಯಲ್ಲಿ ನಾನಾ ಭಾಗಗಳಿಂದ ಸುಮಾರು 5 ಸಾವಿರ ಜನ ಮಾನ್ಯ ಹೊರಟ್ಟಿಯವರ ಮನೆ ಮುಂದೆ ಧರಣಿ ಮಾಡಿದರು. ದಿನಗೂಲಿ ನೌಕರರನ್ನು ಖಾಯಂ ಮಾಡಬೇಕು ಎಂದು. 17 ಸಾವಿರ ದಿನಗೂಲಿ ನೌಕರರಿದ್ದಾರೆ. 17 ಸಾವಿರ ಜನರೂ ಬೀದಿಗೆ ಬಂದಿದ್ದಾರೆ, ಹತ್ತಾರು ವರ್ಷಗಳಿಂದ ಇಡೀ ರಾಜ್ಯದ ಅನೇಕ ಇಲಾಖೆಗಳಲ್ಲಿ ಇದ್ದಾರೆ. ಅವರ ಸಂಬಳವೂ ಬಹಳ ಕನಿಷ್ಟ. ಯಾವ ಸವಲತ್ತುಗಳೂ ಇಲ್ಲ. 800–900 ರೂ. ಈ ತರಹ. ಇವರಿಗೆ ರಜೆದಿನಗಳಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅವರು ಇರುವಾಗ 10–1–2006 ರಲ್ಲಿ ಸುಪ್ರೀಂಕೋರ್ಟ್ ಇವರನ್ನು ಖಾಯಂ ಮಾಡಬಾರದು ಅಂತ ಒಂದು ತೀರ್ಮ ಕೊಡುತ್ತದೆ. ಅದರ ಆಧಾರದ ಮೇಲೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಇವರನ್ನು ಕೆಲಸದಿಂದ ತೆಗೆದುಬಿಡಿ ಎಂದು ಹೇಳುತ್ತಾರೆ. ನನಗನ್ನಿಸುತ್ತದೆ, ಮಾನವೀಯತೆ ದೃಷ್ಟಿಯಿಂದ 17 ಸಾವಿರ